ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಹಾಂಗ್‌ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಜೋಡಿ ಫೈನಲ್‌ಗೆ ಲಗ್ಗೆ ಇಟ್ಟಿದೆ.



ಡಿಜಿಟಲ್ ಪಾವತಿ ಸರಾಗ ಗೊಳಿಸಿದ ಯುಪಿಐ » 2



ಗಡಿಯಂಚಿನಿಂದ ಮುಂಚೂಣಿಗೆ ಬಂದ ಈಶಾನ್ಯ ಭಾರತ » 3



ಪರಸ್ಪರ ಸಹಕಾರದಿಂದ ಸಹಕಾರಿ ಕ್ಷೇತ್ರ ಬೆಳವಣಿಗೆ » 4

# ಪರಿಹಾರ 10 ಲಕ್ಷರೂ.ಗೆ ಹೆಚ್ಚಿಸಿ: ದೇವೇಗೌಡ

### ಜೆಡಿಎಸ್‌ನಿಂದ ಮೃತರ ಕುಟುಂಬಕ್ಕೆ 1 ಲಕ್ಷ ರೂ. ನೆರವು | ಗಾಯಾಳುಗಳ ಆರೋಗ್ಯ ವಿಚಾರಿಸಿದ ಮಾಜಿ ಪ್ರಧಾನಿ

• ಪ್ರಜೋದಯ ವರದಿ

**ಹಾಸನ:** ಮೊಸಳೆಹೊಸಳ್ಳಿ ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಸರ್ಕಾರದ ಪರಿಹಾರ ಮೊತ್ತವನ್ನು 5 ಲಕ್ಷದಿಂದ 10 ಲಕ್ಷ ರೂ. ಗೆ ಹೆಚ್ಚಿಸಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಒತ್ತಾಯಿಸಿದರು.

ಶನಿವಾರ ನಗರದ ಪ್ರವಾಸಿ ಮಂದಿರದಲ್ಲಿ ಮೊಸಳೆಹೊಸಳ್ಳಿಯಲ್ಲಿ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಸಂಭವಿಸಿದ ಅಪಘಾತ ಪ್ರಕರಣಕ್ಕೆಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದುಡಿಯಬೇಕಾದ ಮಕ್ಕಳು ಮೃತಪಟ್ಟಿದ್ದಾರೆ. ಪರಿಹಾರ ಮೊತ್ತವನ್ನು ಹೆಚ್ಚಳ ಮಾಡುವುದರಿಂದ ವಯಸ್ಸಾಗಿರುವ ತಂದೆ- ತಾಯಂದಿರ ಜೀವನ ನಿರ್ವಹಣೆಗೆ ಅನುಕೂಲವಾಗುತ್ತದೆ. ಹೀಗಾಗಿ ಪರಿಹಾರ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿನಂತಿಸುತ್ತೇನೆ. ಈ ವಿಚಾರದಲ್ಲಿ ನಾನು ರಾಜಕೀಯ ಮಾಡುವುದಿಲ್ಲ ಎಂದರು.

ನಮ್ಮದು ಸಣ್ಣ ಪಕ್ಷ ಹೀಗಾಗಿ ಜೆಡಿಎಸ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ 1 ಲಕ್ಷ ರೂ., ಗಂಭೀರವಾಗಿ ಗಾಯಗೊಂಡಿರುವವರಿಗೆ 25 ಸಾವಿರ ರೂ., ಸಣ್ಣ ಪ್ರಮಾಣದಲ್ಲಿ ಗಾಯಗೊಂಡಿರುವವರಿಗೆ 20 ಸಾವಿರ ರೂ. ಹಾಗು 10 ಸಾವಿರ ರೂ. ಪರಿಹಾರ ನೀಡಲಾಗುವುದೆಂದು ತಿಳಿಸಿದರು.

ಮೊಸಳೆಹೊಸಳ್ಳಿ ನನ್ನ ತಾಯಿ ಊರಾಗಿದ್ದು,



## ಪ್ರಧಾನಿ ಸಂತಾಪ : 2 ಲಕ್ಷ ರೂ. ಪರಿಹಾರ



ಮೊಸಳೆಹೊಸಳ್ಳಿ ಬಳಿ ಗಣಪತಿ ಮೆರವಣಿಗೆ ವೇಳೆ ಕ್ಯಾಂಟರ್ ಹರಿದು ವಿದ್ಯಾರ್ಥಿಗಳು ಸೇರಿ 10 ಜನರು ಸಾವನ್ನಪ್ಪಿದ ಪ್ರಕರಣದ ಕುರಿತಾಗಿ ಟ್ವಿಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ಹಾಸನದಲ್ಲಿ ಹೃದಯ ವಿದ್ರಾವಕ ಘಟನೆ ನಡೆದಿದೆ. ದುಃಖತಪ್ತ ಕುಟುಂಬಗಳಲ್ಲಿ ನಾನು ಭಾಗಿಯಾಗಿದ್ದೇನೆ. ಗಾಯಗೊಂಡವರು ಆದಷ್ಟು ಬೇಗ ಚೇತರಿಸಿಕೊಳ್ಳಲಿ ಎಂದು ಆಶಿಸುತ್ತೇನೆ ಎಂದಿದ್ದಾರೆ. ಜೊತೆಗೆ ಮೃತರ ಕುಟುಂಬಕ್ಕೆ 2 ಲಕ್ಷ ರೂ., ಗಾಯಾಳುಗಳಿಗೆ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.

## ಚಾಲಕನ ತಪ್ಪಿಗೆ ಸರ್ಕಾರ ಹೇಗೆ ಹೊಣೆ: ಸಿಎಂ



ಮೈಸೂರು: ಸರ್ಕಾರ ಸತ್ತವರ ಕುಟುಂಬದವರಿಗೆ ಪರಿಹಾರ ನೀಡುವುದು ಸಾವಿಗೆ ಸಮಾನ ಎಂದಲ್ಲ, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಲು ಪರಿಹಾರ ನೀಡಲಾಗುತ್ತದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು. ಮೈಸೂರಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರ ಅಪಘಾತ ದಲ್ಲಿ ಮಡಿದವರ ಕುಟುಂಬಸ್ಥರಿಗೆ 5 ಲಕ್ಷ ರೂ. ಪರಿಹಾರ ಘೋಷಣೆ ಮಾಡಿದ್ದು ಬಿಜೆಪಿ ಅದನ್ನು 10 ಲಕ್ಷಕ್ಕೆ ಏರಿಸಬೇಕೆಂಬ ಹೇಳಿಕೆಗೆ ಪ್ರತಿಕ್ರಿಯಿಸಿ, ಸರ್ಕಾರ ರಸ್ತೆ ಸುರಕ್ಷತಾ ಕಾನೂನು ಜಾರಿ ಮಾಡಿದ್ದು, ಕ್ರಮಗಳನ್ನು ಕೈಗೊಂಡಿದೆ. ಚಾಲಕನ ತಪ್ಪಿನಿಂದ ಅಪಘಾತವಾಗಿದೆ. ಅದಕ್ಕೆ ಸರ್ಕಾರ ಹೇಗೆ ಹೊಣೆಯಾಗಲು ಸಾಧ್ಯ ಎಂದು ಪ್ರಶ್ನಿಸಿದರು.

ಅಲ್ಲಿ ಈ ದುರ್ಘಟನೆ ನಡೆದಿರುವುದನ್ನು ನೋಡಿಕೊಂಡು ಸುಮ್ಮನೆ » ನಾಲ್ಕನೇ ಪುಟದಲ್ಲಿ

# ನೊಂದವರ ಜೊತೆ ಸರ್ಕಾರ ಇರಲಿದೆ: ಸಚಿವ ಕೃಷ್ಣಬೈರೇಗೌಡ

### ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಾಗುವುದು | ತಪ್ಪಿತಸ್ಥರ ವಿರುದ್ಧ ಕ್ರಮದ ಭರವಸೆ

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ಹೃದಯ ವಿದ್ರಾವಕ ಘಟನೆ ನಡೆದಿದೆ. ಕ್ಷಣಮಾತ್ರದಲ್ಲಿ ಹೀಗಾಗುತ್ತದೆಂದು ಯಾರೂ ಊಹಿಸಿರಲಿಲ್ಲ. ಮೃತರ ಕುಟುಂಬ ಹಾಗು ಗಾಯಾಳುಗಳ ಜೊತೆ ಸರ್ಕಾರ ಇರುತ್ತದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಸಂಭವಿಸಿದ ಕ್ಯಾಂಟರ್ ಡಿಕ್ಕಿಯಲ್ಲಿ ಸಾವಿಗೀಡಾದ ಹೊಳೆನರಸೀಪುರ ತಾಲ್ಲೂಕು ಡನಾಯಕನಹಳ್ಳಿಯ ಈಶ್ವರ್ ಸಂಬಂಧಿಕರಿಗೆ ಸಾಂತ್ವನ ಹೇಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಜೆಗೆ ಅವಕಾಶ ನೀಡಿದ್ದು ಅವಘಡಕ್ಕೆ ಕಾರಣ ವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಧಾರ್ಮಿಕ ಕೆಲಸಗಳಿಗೆ ಎಲ್ಲರ ಸಹಕಾರ ಬೇಕಾಗುತ್ತದೆ. ಆದರೆ ಅಲ್ಲಿ ಬೇರೆಯದ್ದೇ ನಡೆಯುತ್ತದೆ. ಏಕಾಏಕಿ ಕಟ್ಟುನಿಟ್ಟು ಮಾಡಲು ಹೋದರೆ ಧಾರ್ಮಿಕ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತಿಲ್ಲವೆಂದು ತಿರುವು ಕೊಡಲಾಗುತ್ತದೆಂದರು.

ಈ ದುರದೃಷ್ಟಕರ ಘಟನೆ ನಡೆಯಬಾರದಿತ್ತು. ಕ್ಯಾಂಟರ್ ಚಾಲಕ ಭುವನೇಶ್‌ನ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣವೆಂದು ತಿಳಿದುಬಂದಿದೆ. ಆತನ ವಿರುದ್ಧ ಗೊರೂರು ಠಾಣೆ ಯಲ್ಲಿ ಎಫ್ಐಆರ್ ದಾಖಲಾಗಿದೆ. ಆತ ಪೊಲೀಸರ ವಶದಲ್ಲಿದ್ದು, ತನಿಖೆ ನಡೆಯುತ್ತಿದೆಯೆಂದರು.

ದುರಂತದ ನಂತರ ಸ್ಥಳೀಯರಿಂದ ಥಳಿತಕ್ಕೊಳಗಾಗಿ ಗಾಯಗೊಂಡಿರುವ ಚಾಲಕ ಚಿಕಿತ್ಸೆ ಪಡೆಯುತ್ತಿದ್ದು, ಆತನ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

**ಕೋಮು ಬಣ್ಣ ಬಳಿಯಬೇಡಿ**

ಘಟನೆಗೆ ವಿಪಕ್ಷದವರು ಕೋಮು ಬಣ್ಣ ಬಳಿಯಲು ಯತ್ನಿಸುತ್ತಿರುವುದೂ ಕಂಡುಬಂದಿದೆ. ಸಮಾಜದಲ್ಲಿ ಅಶಾಂತಿಗೆ ಕಾರಣವಾಗುವ ಇಂತಹ ದುರ್ವರ್ತನೆ ಸಹ ಅಪರಾಧವಾಗಿದ್ದು, ಅಂತಹವರ ವಿರುದ್ಧವೂ ಸಹ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಚ್ಚರಿಸಿದರು.

**ರಸ್ತೆ ಅವೈಜ್ಞಾನಿಕವಾಗಿಲ್ಲ**

ಹಾಸನ-ಮೈಸೂರು ರಾಷ್ಟ್ರೀಯ ಹೆದ್ದಾರಿ 373ರಲ್ಲಿ ದುರಂತ ಸಂಭವಿಸಿದ್ದು, ರಸ್ತೆ ವೈಜ್ಞಾನಿಕ ವಾಗಿ ನಿರ್ಮಾಣವಾಗಿಲ್ಲ, ಅಗಲೀಕರಣ ಆಗಬೇಕೆಂಬ ಕೂಗು ಹಿಂದಿನಿಂದಲೂ ಕೇಳಿ ಬರುತ್ತಿದೆ. ಈ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸರ್ಕಾರದ ಪರ ವಾಗಿ ನಾನು ಹಾಗು ಸಂಸದ ಶ್ರೇಯಸ್ ಪತ್ರ ಬರೆಯುತ್ತೇವೆ. ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಹೆದ್ದಾರಿ ಪ್ರಾಧಿಕಾರವೂ ಪರಿಹಾರ ನೀಡಬೇಕಿದೆ ಎಂದರು.

**ಗ್ರಾಮದಲ್ಲಿ ಬಿಗಿ ಭದ್ರತೆ**

ದುರಂತ ಕುರಿತು ಪ್ರತಿಕ್ರಿಯೆ ನೀಡಿದ ದಕ್ಷಿಣ ವಲಯ ಐಜಿಪಿ ಡಾ. ಬೋರಲಿಂಗಯ್ಯ ಅವರು, ಕ್ಯಾಂಟರ್ ಚಾಲಕನ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣ ಎಂದರು. ಇನ್ನೂ ಘಟನಾ ಸ್ಥಳದಲ್ಲಿ ಸೊಕೋ ತಂಡ ಕೂಡ ಭೇಟಿ ನೀಡಿ ಪರಿಶೀಲನೆ ನಡೆಸಿತು. ಅಪಘಾತದ ಕಾರಣ ತಿಳಿಯಲು ತನಿಖೆ ಆರಂಭಿಸಿದೆ. ತಜ್ಞರ ತಂಡ ಘಟನಾ ಸ್ಥಳವನ್ನು ಇಂಚಿಂಚೂ ಪರಿಶೀಲನೆ ಮಾಡಿತು. ಮುನ್ನೆಚ್ಚರಿಕೆ ಕ್ರಮವಾಗಿ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವಹಿಸಲಾಗಿದೆ.

# ಪೊಲೀಸರ ವೈಫಲ್ಯಕ್ಕೆ ಸರ್ಕಾರವೇ ಹೊಣೆ: ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಮೊಸಳೆಹೊಸಳ್ಳಿ ದುರ್ಘಟನೆ ಯಲ್ಲಿ ಪೊಲೀಸರ ವೈಫಲ್ಯವೂ ಇದೆ. ರಸ್ತೆಗೆ ಬ್ಯಾರಿಕೇಡ್ ಹಾಕಿದ್ದರೆ ಕ್ಯಾಂಟರ್ ಲಾರಿ ವೇಗವಾಗಿ ಬರುತ್ತಿರ ಲಿಲ್ಲ. ಅಪಘಾತವೂ ನಡೆಯುತ್ತಿರ ಲಿಲ್ಲ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸರ ವೈಫಲ್ಯ ಎಂದರೇ ಏನು.. ಸರ್ಕಾರದ ವೈಫಲ್ಯವೆಂದರೆ ಏನು ಎಂದು ಪ್ರಶ್ನಿ ಸಿದ ಅವರು, ಅಧಿಕಾರಿಗಳು ಮಾಡಿ ರುವ ಲೋಪಕ್ಕೆ ಸರ್ಕಾರವೇ ಹೊಣೆ. ಮುಖ್ಯಮಂತ್ರಿಯೇ ಸ್ಥಳಕ್ಕೆ ಬಂದು ಪರಿಶೀಲಿಸಲಿ. ಪೊಲೀಸರ ತಪ್ಪು ಇಲ್ಲವೆಂದರೇ ನಾನು ಸಿದ್ದರಾಮಯ್ಯ ಅವರ ಬಳಿ ಕ್ಷಮೆ ಕೇಳುತ್ತೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲಾರಿ ವೇಗ ಎಷ್ಟಿತ್ತು ಎಂದು ಹೇಳಲು ಸಾಧ್ಯವಾಗುತ್ತಿಲ್ಲ. ರಸ್ತೆ ವಿಭಜಕ ಇಲ್ಲದಿದ್ದರೆ ನೂರಕ್ಕೂ ಹೆಚ್ಚು ಜನರು ಸಾವಿಗೀಡಾಗುತ್ತಿದ್ದರು. ಲಾರಿ ಚಾಲಕ ಮದ್ಯ ಸೇವನೆ ಮಾಡಿದ್ದ ಎಂದು ಹೇಳಲಾಗುತ್ತಿದೆ, ಆ ಬಗ್ಗೆ ಪೊಲೀಸರೇ ಸ್ಪಷ್ಟಪಡಿಸಬೇಕು. ಬ್ಯಾರಿಕೇಡ್ ಏಕೆ ಹಾಕಲಿಲ್ಲ, ಈ ಹಿಂದೆ ಹಾಕಿದ್ದ ಬ್ಯಾರಿಕೇಡ್‌ಗಳನ್ನು ಏಕೆ ತೆಗೆಯಲಾಗಿತ್ತು ಎಂದು ಪ್ರಶ್ನಿ ಸಿದ ಅವರು, ವೃತ್ತ ನಿರೀಕ್ಷಕನ ವಿರುದ್ಧ ಕ್ರಮ ತೆಗೆದುಕೊಂಡು ಪೊಲೀಸರಿಗೆ ಎಚ್ಚರಿಕೆ ನೀಡಬೇಕು. ಈ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಐಜಿಪಿಗೂ ಹೇಳಿದ್ದೇನೆ. ಚಿಕ್ಕವಯಸ್ಸಿನ ಬಡವರ ಮಕ್ಕಳು ಮೃತಪಟ್ಟಿರುವುದನ್ನು ನೋಡಲು ಆಗು ತ್ತಿಲ್ಲ ಎಂದರು.

ನಾನು ಘಟನೆ ನಡೆದ ಸ್ಥಳದಲ್ಲಿ ಇಲ್ಲದಿದ್ದರೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಯನ್ನು ಆಕ್ರೋಶ ಗೊಂಡ ಜನರು ಏನು ಮಾಡುತ್ತಿದ್ದರು ಎಂದು ಗೊತ್ತಿಲ್ಲ. ದೊಡ್ಡ ಅನಾ ಹುತವೇ ಸೃಷ್ಟಿಯಾಗುತ್ತಿತ್ತು. ಜನ ರನ್ನು ಸಮಾಧಾನ ಮಾಡಿ ಕಳುಹಿಸಿದ್ದೇನೆಂದು ಹೇಳಿದರು.



> ಮೊಸಳೆಹೊಸಳ್ಳಿ ಬಳಿ ಗಣಪತಿ ಮೆರವಣಿಗೆ ವೇಳೆ ಲಾರಿ ಹರಿದು ಮೃತಪಟ್ಟ ಕುಟುಂಬಗಳಿಗೆ ರಾಜ್ಯ ಸರ್ಕಾರ 20 ಲಕ್ಷ ರೂ. ಪರಿಹಾರ ಘೋಷಣೆ ಮಾಡಿ, ಬಡ ಕುಟುಂಬಗಳಿಗೆ ನೆರವಾಗಬೇಕು.
> **-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

# ಸಾವಿನ ಮೆರವಣಿಗೆ ಸ್ಥಳಕ್ಕೆ ಸಚಿವರ ಭೇಟಿ, ಸಾಂತ್ವನ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಗಣೇಶ ಮೂರ್ತಿ ಮೆರವಣಿಗೆ ವೇಳೆ ಕ್ಯಾಂಟರ್ ಡಿಕ್ಕಿಯಾಗಿ 10 ಜನರು ಮೃತಪಟ್ಟ ಸ್ಥಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ವಿಪಕ್ಷ ನಾಯಕ ಆರ್.ಅಶೋಕ್ ಭೇಟಿ ನೀಡಿದರೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಹಿಮ್ಸ್‌ನಲ್ಲಿ ಗಾಯಾಳುಗಳ ಆರೋಗ್ಯ ಪರಿಶೀಲಿಸಿದರು.

ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕರಾದ ಹೆಚ್.ಪಿ.ಸ್ವರೂಪ್, ಸಿಮೆಂಟ್ ಮಂಜು, ಹೆಚ್.ಕೆ.ಸುರೇಶ್ ಮತ್ತಿತರರು ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮಧ್ಯರಾತ್ರಿ 3 ಗಂಟೆವರೆಗೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರೊಂದಿಗೆ ದೂರವಾಣಿ ಸಂಪರ್ಕದಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಪ್ರತಿಕ್ಷಣದ ಮಾಹಿತಿ ಪಡೆದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರುತ್ತಿದ್ದರು. » ನಾಲ್ಕನೇ ಪುಟದಲ್ಲಿ



## ಮತ್ತೊಬ್ಬ ಯುವಕ ಸಾವು: ಸಾವಿನ ಸಂಖ್ಯೆ 10ಕ್ಕೆ ಏರಿಕೆ

ಮೊಸಳೆಹೊಸಳ್ಳಿಯಲ್ಲಿ ಸಂಭವಿಸಿದ ಕ್ಯಾಂಟರ್ ಡಿಕ್ಕಿಯಲ್ಲಿ ಗಂಭೀರ ಗಾಯಗೊಂಡಿದ್ದ ಮತ್ತೊಬ್ಬ ಯುವಕ ಶನಿವಾರ ಮೃತಪಟ್ಟಿದ್ದು ಒಟ್ಟು ಸಾವಿನ ಸಂಖ್ಯೆ 10ಕ್ಕೆ ಏರಿಕೆಯಾಗಿದೆ. ಶಾಂತಿಗ್ರಾಮ ಹೋಬಳಿ ಶಿವಯ್ಯನಕೊಪ್ಪಲು ಗ್ರಾಮದ ಚಂದನ್ (26) ಮೃತ ದುರ್ದೈವಿ. ಗಂಭೀರ ಗಾಯಗೊಂಡಿದ್ದ ಆತನನ್ನು ಹಿಮ್ಸ್‌ಗೆ ದಾಖಲಿಸಲಾಗಿತ್ತು. ಮತ್ತೊಬ್ಬ ಗಾಯಾಳು ಋತ್ವಿಕ್ ಪರಿಸ್ಥಿತಿಯೂ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.

## ಪರಿಹಾರ ಮೊತ್ತ ಹೆಚ್ಚಿಸಲು ಆರ್.ಅಶೋಕ್ ಆಗ್ರಹ


ಮೊಸಳೆಹೊಸಳ್ಳಿ ಗಣೇಶೋತ್ಸವ ವೇಳೆ ಸಂಭವಿಸಿದ ದುರ್ಘಟನೆಯಲ್ಲಿ ಮೃತ ಕುಟುಂಬ ಸ್ಥರಿಗೆ ಪರಿಹಾರ ಮೊತ್ತ ಹೆಚ್ಚಿಸಬೇಕೆಂದು ವಿಪಕ್ಷ ನಾಯಕ ಆರ್. ಅಶೋಕ್ ಅವರು ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ಘಟನೆ ನಡೆಯಬಾರದಿತ್ತು. ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಕೂಡಲೇ ಸ್ಪಂದಿಸಿವೆ. ಕುಟುಂಬಕ್ಕೆ ಆಧಾರವಾಗಿದ್ದ ಯುವಕರೇ ಇಹಲೋಕ ತ್ಯಜಿಸಿದ್ದು ನೋವಿನ ಸಂಗತಿ. ರಾಜ್ಯ ಸರ್ಕಾರ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದ್ದು ಅದನ್ನು ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ಪರಿಹಾರ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ಇಲ್ಲಿ ರಾಜಕೀಯ ಮಾಡಲು ಬಂದಿಲ್ಲ. ನಾನು ರಾಜ್ಯ ಸರ್ಕಾರದ ಜೊತೆ ಮಾತನಾಡುತ್ತೇನೆ. ಮೃತರ ಕುಟುಂಬಗಳಿಗೆ ಹೆಚ್ಚಿನ ಪರಿಹಾರ ನೀಡಿ ಎಂದು ಒತ್ತಾಯಿಸುತ್ತೇನೆ. ದೊಡ್ಡ ಮಟ್ಟದ ಮೆರವಣಿಗೆಗಳು ನಡೆಯ ಬೇಕಾದರೆ ಇನ್ನೂ ಹೆಚ್ಚು ಪೊಲೀಸ್ ಬಂದೋಬಸ್ತ್ ಮಾಡಬೇಕಿತ್ತು. ರಸ್ತೆಯಲ್ಲಿ ಹಂಪ್ಸ್ ಹಾಕಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ. ಜಿಲ್ಲಾಧಿಕಾರಿ ಜೊತೆ ಮಾತನಾಡಿ ಶೀಘ್ರ ಕ್ರಮಕ್ಕೆ ಸೂಚಿಸುತ್ತೇನೆಂದರು.

# ನಿರ್ಮಲಾನಂದನಾಥ ಶ್ರೀ ಸಂತಾಪ

• ಪ್ರಜೋದಯ ವರದಿ



**ಹಾಸನ:** ಮೊಸಳೆಹೊಸಳ್ಳಿಯಲ್ಲಿ ಸಂಭವಿಸಿದ ಅವಘಡಕ್ಕೆ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.

ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಿದ್ದ ಗಣೇಶ ವಿಸರ್ಜನೆಯ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಭಕ್ತರ ಮೇಲೆ ಕ್ಯಾಂಟರ್ ಲಾರಿ ಹರಿದು ಹತ್ತು ಜನರು ದುರ್ಮರಣಕ್ಕೀಡಾಗಿರುವುದು ಅತ್ಯಂತ ದು:ಖದ ವಿಷಯ. ಇದೇ ಘಟನೆಯಲ್ಲಿ ಇಪ್ಪತ್ತಕ್ಕೂ ಹೆಚ್ಚು ಜನರು ಗಾಯಗೊಂಡಿರುವುದು ದಿಗ್ಭ್ರಮೆ ಮೂಡಿಸಿದೆ. ಭಗವಂತ ಮೃತರ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ, ತಮ್ಮ ಕುಟುಂಬದವರನ್ನು ಕಳೆದುಕೊಂಡ ಕುಟುಂಬ ವರ್ಗ ಹಾಗು ಬಂಧು ಮಿತ್ರರಿಗೆ ದು:ಖ ಭರಿಸುವ ಶಕ್ತಿಯನ್ನು ನೀಡಲೆಂದು ಆಶಿಸುತ್ತಾ, ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ.

# ಕುಟುಂಬಸ್ಥರ ಆಕ್ರಂದನ..ಅಧಿಕಾರಿಗಳ ಮೌನ.. ಮುಗಿಯದ ಗೋಳು

• ಪ್ರಜೋದಯ ವರದಿ

**ಹಾಸನ:** ನಗರದ ಹಿಮ್ಸ್ ಆವರಣದಲ್ಲಿ ಶುಕ್ರವಾರ ರಾತ್ರಿ 9 ಗಂಟೆಯಿಂದ ಕೇವಲ ದು:ಖ, ದುಗುಡ, ಗಾಢ ಮೌನ, ಕುಟುಂಬಸ್ಥರ ರೋದನೆ, ಅಧಿಕಾರಿಗಳ ಮೌನ ಮನೆ ಮಾಡಿದೆ.

ಮೊಸಳೆಹೊಸಳ್ಳಿಯಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ನಡೆದ ಘೋರ ದುರಂತದ ಪರಿಣಾಮ ಮೃತ ದೇಹಗಳನ್ನು ಶವಾಗರದಲ್ಲಿಸಿದರೆ ಗಾಯಾಳುಗಳಿಗೆ ಐಸಿಯುನಲ್ಲಿ ಚಿಕಿತ್ಸೆ ನಡೆಯುತ್ತಿತ್ತು. ಮೃತ 10 ಜನರಲ್ಲಿ ಒಬ್ಬ 55 ವರ್ಷದ ವ್ಯಕ್ತಿಯಾದರೆ ಉಳಿದವರೆಲ್ಲ 25ಕ್ಕಿಂತ ಕಡಿಮೆ ವಯಸ್ಸಿನವರು. ಪಿಯುಸಿ, ಪದವಿ, ಇಂಜಿನೀಯರಿಂಗ್‌ನಲ್ಲಿ ಮಕ್ಕಳಿಗ ಇಲ್ಲವಾಗಿದ್ದಾರೆ. ಕುಟುಂಬಸ್ಥರಿಗೆ ಸಾವಿನ ವಿಷಯ ತಿಳಿಸಿದರೆ ಕುಸಿದು ಬೀಳುತ್ತಾರೆಂದು, ಕರೆ ಮಾಡಿದ ಅಧಿಕಾರಿ ಹಾಗು ಕಾಲೇಜು ಸಿಬ್ಬಂದಿ, ಏನೂ ಆಗಿಲ್ಲ ಸಣ್ಣ ಪುಟ್ಟ ಗಾಯವಾಗಿದೆ ದಯವಿಟ್ಟು ಬೇಗ ಬನ್ನಿರಿ ಎಂದಷ್ಟೇ ಹೇಳುತ್ತಿದ್ದರು. ಮಧ್ಯ ರಾತ್ರಿಯಿಂದಲೇ ಆಸ್ಪತ್ರೆಯತ್ತ ಆಗಮಿಸಿದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.



**ನನ್ನ ಮಗನನ್ನು ಕಳುಹಿಸಿಬಿಟ್ರಾ**

ಬಳ್ಳಾರಿ ಜಿಲ್ಲೆಯ ನಾಗಲಕೆರೆಯ ಸುಶೀಲಾ ಗಂಡನನ್ನು ಕಳೆದುಕೊಂಡು ಮನೆಗೆಲಸ ಮಾಡಿ ಪುತ್ರ ಪ್ರವೀಣ್‌ನನ್ನು ಇಂಜಿನೀಯರ್ ಮಾಡಿಸಬೇಕೆಂಬ ಕನಸು ಹೊತ್ತಿದ್ದರು. ರಾತ್ರಿ 3 ಗಂಟೆಗೆ ಬಂದ ಅವರು, ಇಂಜಿನೀಯರಿಂಗ್ ಮಾಡಿಕೊಂಡು ಬಾ ಎಂದು ನಿಮ್ಮೂರಿಗೆ ಕಳುಹಿಸಿದ್ದೆ, ನೀವು ನನ್ನ ಮಗನನ್ನು ಸಾಯಿಸಿ ಕಳುಹಿಸುತ್ತಿದ್ದೀರ ಎಂದು ಗೋಳಾಡಿದರು.

**ಚಕ್ರದ ಮಧ್ಯೆ ಮಲಗಿ ಬಚಾವ್ ಆದೆ**

ಡಿಜೆ ಶಬ್ದಕ್ಕೆ ಹೆಜ್ಜೆ ಹಾಕುತ್ತಿದ್ದಾಗ ದಿಢೀರ್ ಸಂಭವಿಸಿದ ಅಪಘಾತದಲ್ಲಿ ಜೊತೆಗಿದ್ದವರೆಲ್ಲ ಲಾರಿಯ ಚಕ್ರದಡಿ ಸಿಲುಕಿ ಕಣ್ಣೆದುರೇ ಪ್ರಾಣ ಬಿಟ್ಟರು.

» ನಾಲ್ಕನೇ ಪುಟದಲ್ಲಿ

# ರಾಜಕೀಯ ನಿವೃತ್ತಿ ಘೋಷಿಸಿಲ್ಲ: ಹೆಚ್‌ಡಿಡಿ

• ಪ್ರಜೋದಯ ವರದಿ



**ಹಾಸನ:** ನಾನು ರಾಜಕೀಯದಿಂದ ನಿವೃತ್ತನಾಗುತ್ತೇನೆಂದು ಎಲ್ಲೂ ಹೇಳಿಲ್ಲ. ರಾಜಕೀಯ ದಲ್ಲೇ ಇರುತ್ತೇನೆ. ನನ್ನ ಕೆಲಸ ಮುಗಿದಿಲ್ಲ, ಮಾಡಬೇಕಿರುವುದು ಇನ್ನೂ ಇದೆ. ಈಗಲೂ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಸಭೆಯಲ್ಲಿ ಭಾಗವಹಿಸುತ್ತೇನೆ, ಅವರೂ ನನ್ನ ಹೆಸರು ಪ್ರಸ್ತಾಪ ಮಾಡುತ್ತಾರೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅವರು ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನನಗೆ 93 ವರ್ಷ ನಡೆಯುತ್ತಿದೆ. ಈ ವಯಸ್ಸಿನಲ್ಲಿ ಹೀಗೆ ಸುತ್ತಲು ನನಗೆ ಭ್ರಮೆಯಿದೆಯೇ ಎಂದು ನನ್ನನ್ನು ಯಾರಾದರು ಕೇಳ ಬಹುದು. ಆದರೆ, ನನಗೆ ರಾಜಕೀಯದಲ್ಲಿ ಯಾವುದೇ ಭ್ರಮೆ ಇಲ್ಲ. ಎಲ್ಲಿಯವರೆಗೆ ಕೆಲಸ ಮಾಡುವ ಶಕ್ತಿ ಇದೆಯೋ ಅಲ್ಲಿಯವರೆಗೂ ಮಾಡುತ್ತೇನೆ ಎಂದರು.

ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಎ.ಮಂಜು, ಹೆಚ್.ಕೆ.ಕುಮಾರಸ್ವಾಮಿ, ಶಾಸಕರಾದ ಸಿ.ಎನ್.ಬಾಲಕೃಷ್ಣ, ಹೆಚ್.ಪಿ.ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಮೇಯರ್ ಹೇಮಲತಾ ಕಮಲ್‌ಕುಮಾರ್ ಹಾಜರಿದ್ದರು.

# ಜಿಲ್ಲೆಯ ವಿವಿಧೆಡೆ ಅಪಘಾತ: ಐವರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಅರಕಲಗೂಡು, ಕೊಣನೂರು ಹಾಗು ಹಾಸನ ಸಂಚಾರ ಠಾಣೆ ವ್ಯಾಪ್ತಿ ಯಲ್ಲಿ ಶುಕ್ರವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟು ಇಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.

ಹೊಳೆನರಸೀಪುರ-ಹಾಸನ ರಸ್ತೆಯಲ್ಲಿ ಬರುತ್ತಿದ್ದಾಗ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿದ್ದಾರೆ. ಹಳೇಕೋಟೆ ಹೋಬಳಿ ಶ್ರೀರಾಮನಗರ ಗ್ರಾಮದ ಲೋಕೇಶ್ (48) ಮೃತರು. ಹಾಸನಕ್ಕೆ ಬರುತ್ತಿದ್ದ ಅವರು ಮುಖ್ಯ ರಸ್ತೆಯಲ್ಲಿ ಬೈಕ್ ತಿರುಗಿಸುತ್ತಿದ್ದಾಗ ಹಾಸನದಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ತಲೆಗೆ ಬಲವಾದ ಗಾಯವಾದ ಹಿನ್ನಲೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹೊಳೆನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಆಟೋ ಚಾಲಕ ಮೃತಪಟ್ಟು ಇಬ್ಬರು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಹಾಸನದ ಎಸ್.ಎಂ.ಕೃಷ್ಣ ಬಡಾವಣೆಯ ಸ್ವಾಗತ ಕಮಾನು ಸಮೀಪ ನಡೆದಿದೆ. ಎಸ್.ಎಂ.ಕೃಷ್ಣ ಬಡಾವಣೆಯ ಆಟೋ ಚಾಲಕ ಹೆಚ್.ಜೆ. ಪರಮೇಶ್ (65) ಮೃತರು.

ಪ್ರಯಾಣಿಕರಾದ ಪೃಥ್ವಿ ಹಾಗು ಪ್ರಜ್ವಲ್ ಎಂಬುವವರಿಗೆ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಂಜೆ 7ರ ಸಮಯದಲ್ಲಿ ನಗರದಿಂದ ಎಸ್.ಎಂ.ಕೃಷ್ಣ ಬಡಾವಣೆಗೆ ಹೋಗುತ್ತಿದ್ದಾಗ ಅರಸೀಕೆರೆ ಕಡೆಯಿಂದ ವೇಗವಾಗಿ ಬಂದ ಕಿಯಾ ಕಾರು ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಆಟೋ ಪಲ್ಟಿಯಾಗಿ ಮೂವರು ಗಂಭೀರ ಗಾಯಗೊಂಡಿದ್ದರು. ತಕ್ಷಣವೇ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಹಂಪ್ಸ್ ದಾಟುಸುತ್ತಿದ್ದಾಗ ನಿಯಂತ್ರಣ ತಪ್ಪಿ ಬಿದ್ದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕಿನ ಬಸವನಹಳ್ಳಿ ವೃತ್ತದಲ್ಲಿ ನಡೆದಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ನಗರಗೆರೆ ಗ್ರಾಮದ ಹೆಚ್.ನಾಗರಾಜು (40) ಮೃತರು.

ಹೊಳೆನರಸೀಪುರ ತಾಲ್ಲೂಕು ಹಂಗರಹಳ್ಳಿಯ ಬಾಡಿಗೆ ಮನೆಯಲ್ಲಿದ್ದ ಅವರು ಊರೂರಿಗೆ ತೆರಳಿ ಉದ್ದಿನ ಬೇಳೆ, ಕಡಲೆ ಬೇಳೆ ಹಾಗು ಇತರ ಧಾನ್ಯಗಳ ಮಾರಾಟ ಮಾಡಿಕೊಂಡಿದ್ದರು. ಶುಕ್ರವಾರ ಎಂದಿನಂತೆ ಬೈಕ್‌ನಲ್ಲಿ ಕರ್ತವ್ಯಕ್ಕೆಂದು ತೆರಳಿದ್ದರು. ಬೈಚನಹಳ್ಳಿಯಿಂದ ಹಂಗರಹಳ್ಳಿಗೆ ಬರುತ್ತಿದ್ದಾಗ ಬಸವನ ಹಳ್ಳಿ ಕ್ರಾಸ್‌ನಲ್ಲಿ ಹಂಪ್ಸ್ ಹತ್ತಿಸಿದಾಗ ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

**ಜೀಪ್ ಡಿಕ್ಕಿ: ಪಾದಚಾರಿ ಸಾವು**

ಜೀಪ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕು ಕಟ್ಯಾಳು ಬಾರೆ ವೃತ್ತದಲ್ಲಿ ನಡೆದಿದೆ.

ರಾಮನಾಥಪುರ ಹೋಬಳಿ ಕಟ್ಯಾಳು ಬಾರೆಯ ವೆಂಕಟಯ್ಯ (65) ಮೃತರು. ಬೆಳಿಗ್ಗೆ 8.30ರ ಸಮಯದಲ್ಲಿ ಡೇರಿಗೆ ಹಾಲು ಹಾಕಿ ಮನೆಗೆ ತೆರಳುತ್ತಿದ್ದಾಗ » ನಾಲ್ಕನೇ ಪುಟದಲ್ಲಿ

### ಅಂತಿಮ ವರ್ಷದ ಇಂಜಿನೀಯರಿಂಗ್ ವಿದ್ಯಾರ್ಥಿಗಳ ಸಾವು | ಕಾಲೇಜಿನಲ್ಲಿ ನೀರವ ಮೌನ

# ಗಣೇಶ ವೀಕ್ಷಣೆಗೆ ಹೋದವರು ಬಾರದ ಲೋಕಕ್ಕೆ ಪಯಣ

• ಪ್ರಜೋದಯ ವರದಿ

**ಹಾಸನ:** ನಾಲ್ಕು ವರ್ಷಗಳಿಂದ ನಿರಂತರವಾಗಿ ಗಣೇಶೋತ್ಸವ ಮೆರವಣಿಗೆ ನೋಡಿಕೊಂಡು ಬಂದಿದ್ದ ವಿದ್ಯಾರ್ಥಿಗಳು ಇನ್ನೆರಡು ತಿಂಗಳು ಕಳೆದರೆ ಉದ್ಯೋಗ ಅರಸಿ ಬೇರೆ ಕಡೆಗೆ ತೆರಳುವವರಿದ್ದರು. ಮತ್ತೆ ಈ ವೈಭವ ಸಿಗುವುದಿಲ್ಲ ಕೊನೆ ಸಾರಿ ನೋಡಿಕೊಂಡು ಬರೋಣವೆಂದು ಹೋದವರು ಬಾರದ ಲೋಕಕ್ಕೆ ತೆರಳಿದರು...

ಮೊಸಳೆಹೊಸಳ್ಳಿಯಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ಘೋರ ದುರಂತದಲ್ಲಿ ಮೃತಪಟ್ಟ ಇಂಜಿನೀಯರಿಂಗ್ ವಿದ್ಯಾರ್ಥಿಗಳಾದ ಪ್ರವೀಣ್, ಮಿಥುನ್ ಹಾಗು ಸುರೇಶ್ ಅವರ ಕಥೆ ಇದಾಗಿದೆ. ಸ್ನೇಹಿತರೊಂದಿಗೆ ಗಣೇಶೋತ್ಸವ ವೀಕ್ಷಣೆಗೆಂದು ತೆರಳಿದವರು ಜವರಾಯನ ಅಟ್ಟಹಾಸಕ್ಕೆ ಬಲಿಯಾಗಿದ್ದಾರೆ. ಮೃತ ಮೂವರು ಇಂಜಿನೀಯರಿಂಗ್ ವಿದ್ಯಾರ್ಥಿಗಳ ನೋವಿನ ಕಥೆ ಕೇಳಿದರೆ ಯಾರಿಗಾದರೂ ದು:ಖವಾಗುತ್ತದೆ.

ಬಳ್ಳಾರಿ ಜಿಲ್ಲೆ ನಾಗಲಕೆರೆ ಗ್ರಾಮದ ಪ್ರವೀಣ್, ಚಿಕ್ಕಮಗಳೂರು ತಾಲ್ಲೂಕು ಮಣೇನ ಹಳ್ಳಿಯ ಸುರೇಶ್ ಹಾಗು ಹೊಸದುರ್ಗ ತಾಲ್ಲೂಕು ಗವಿರಂಗಾಪುರದ ಮಿಥುನ್ ಮೃತ ಪಟ್ಟಿದ್ದಾರೆ. ಪ್ರವೀಣ್ ಹಾಗು ಮಿಥುನ್ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಓದುತ್ತಿದ್ದರೆ ಸುರೇಶ್ ಎಲೆಕ್ಟ್ರಿಕಲ್ ವ್ಯಾಸಂಗ ಮಾಡುತ್ತಿದ್ದ. ಸೆಮಿಸ್ಟರ್ ಪರೀಕ್ಷೆ ಬರೆದು ಇನ್ನೆರಡು ತಿಂಗಳಲ್ಲಿ ವ್ಯಾಸಂಗ ಮುಗಿಸಿ ಊರಿಗೆ ಹೋಗುವವರಿದ್ದರು. ಶುಕ್ರವಾರ ಸಂಜೆ 4.30ರ ತನಕ ಕಾಲೇಜಿನ ಪ್ರಯೋಗಾಲ ಯದಲ್ಲಿ ನಮ್ಮೊಂದಿಗೆ ಇದ್ದರು. ಆ ಬಳಿಕ ಹಾಸ್ಟೆಲ್‌ಗೆ ತೆರಳಿದ್ದರು. ಮೂವರು ಸಾದು ಸ್ವಭಾವದ ವ್ಯಕ್ತಿತ್ವದವರು. ಇಂಜಿನೀಯರ್‌ಗಳಾಗಿ ಉತ್ತಮ ಭವಿಷ್ಯ ಕಟ್ಟಿಕೊಳ್ಳ ಬೇಕೆಂದು ಕನಸು ಕಂಡಿ ದ್ದವರು ಅಗಲಿದ್ದಾರೆಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲವೆಂದು ಕಂಪ್ಯೂಟರ್ ಸೈನ್ಸ್ ವಿಭಾಗ ಮುಖ್ಯಸ್ಥ ಎಂ.ಇ. ರಘು ಭಾವುಕರಾದರು.

**ತಂದೆ ಕಳೆದುಕೊಂಡಿದ್ದ ಪ್ರವೀಣ್**

ಬಳ್ಳಾರಿಯ ವಿದ್ಯಾರ್ಥಿ ಪ್ರವೀಣ್ ಅವರ ತಂದೆ ಹಿರಿಸ್ವಾಮಿ ನಿಧನರಾಗಿದ್ದು ತಾಯಿ ಸುಶೀಲಾ ಮನೆಗೆಲಸ ಮಾಡಿಕೊಂಡು ಮಗನ ಭವಿಷ್ಯಕ್ಕಾಗಿ ಸರ್ವಸ್ವವನ್ನು ತ್ಯಾಗ ಮಾಡಿದ್ದರು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕ » ನಾಲ್ಕನೇ ಪುಟದಲ್ಲಿ











> ದುರಂತದಲ್ಲಿ ಮೃತಪಟ್ಟ ಮೂವರು ವಿದ್ಯಾರ್ಥಿಗಳು ಪ್ರತಿಭಾವಂತರಾಗಿದ್ದರು. ಎಲ್ಲರ ಕುಟುಂಬ ಹಿನ್ನಲೆ ಅಷ್ಟೇನು ಚೆನ್ನಾಗಿಲ್ಲದ್ದರಿಂದ ಕಷ್ಟಪಟ್ಟು ಓದುತ್ತಿದ್ದರು. ಕ್ಯಾಂಪಸ್ ಸಂದರ್ಶನಗಳಿಗೂ ಹಾಜರಾಗಿದ್ದರು. ಎರಡು ತಿಂಗಳು ಕಳೆದಿದ್ದರೆ ಒಳ್ಳೆಯ ನೌಕರಿಯಲ್ಲಿರುತ್ತಿದ್ದರು. ಅವರ ಅಗಲಿಕೆ ಭಾರೀ ನೋವು ತರಿಸಿದೆ.
> **-ಟಿ.ರಂಗಸ್ವಾಮಿ,** ಪ್ರಾಂಶುಪಾಲ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು

# ಡಿಜಿಟಲ್ ಪಾವತಿ ಸರಾಗ ಗೊಳಿಸಿದ ಯುಪಿಐ

## ಭಾರತದಲ್ಲಿನ ಡಿಜಿಟಲ್ ಪಾವತಿಯಲ್ಲಿ ಯುಪಿಐ ಪಾಲು 85%

ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್ ಅರ್ಥಾತ್ ಯುಪಿಐ ವಹಿವಾಟು ಭಾರತದಲ್ಲಿ ಅದೆಷ್ಟು ಜನಪ್ರಿಯವಾಗಿದೆ ಎಂದರೆ ನಗದು ನೋಟು ನೋಡಿಯೇ ಬಹಳ ದಿನಗಳಾಯಿತು ಎಂದು ಜನರು ಹೇಳುವಂತಾಗಿದೆ. ಗ್ರಾಮೀಣ ಭಾಗದ ಜನರೂ ಡಿಜಿಟಲ್ ಪಾವತಿ ವ್ಯವಸ್ಥೆಯ ಮೇಲೆ ನಂಬಿಕೆ ಇಡುವಂತಾಗಿದೆ. 1 ರು.ನಷ್ಟು ಸಣ್ಣ ಮೊತ್ತದ ಪಾವತಿಗೂ ಡಿಜಿಟಲ್ ಪಾವತಿ ಅನುಸರಿಸಬಹುದು ಎನ್ನುವಂತಾಗಿದೆ.



ಭಾರತದಲ್ಲಿ ನಡೆಯುತ್ತಿರುವ ಒಟ್ಟಾರೆ ಡಿಜಿಟಲ್ ಪಾವತಿಯಲ್ಲಿ ಯುಪಿಐನ ಪಾಲು ಶೇ.85ರಷ್ಟು ದೊಡ್ಡ ಪ್ರಮಾಣದ್ದಾಗಿದೆ. ಜನರಿಗೆ ಮತ್ತು ವರ್ತಕರಿಗೆ ನಿತ್ಯದ ವ್ಯಾಪಾರ ವಹಿವಾಟಿನಲ್ಲಿನ ಹಣ ಪಾವತಿಯನ್ನು ಡಿಜಿಟಲ್ ಪಾವತಿ ವ್ಯವಸ್ಥೆ ಬಲು ಸರಾಗಗೊಳಿಸಿದೆ. ಅದರಲ್ಲೂ ಯುಪಿಐ ಸೌಲಭ್ಯ ಜಾರಿ ಬಳಿಕವಂತೂ ಡಿಜಿಟಲ್ ಪಾವತಿ ವ್ಯವಸ್ಥೆ ಅತ್ಯಂತ ವೇಗಗೊಂಡಿದೆ, ಬಹಳ ವಿಶ್ವಾಸಾರ್ಹವೆನಿಸಿದೆ. ಕ್ಷಣಮಾತ್ರದಲ್ಲಿಯೇ(ರಿಯಲ್ ಟೈಮ್) ಡಿಜಿಟಲ್ ಪಾವತಿ ನಡೆಯುವಂತೆ ಮಾಡಿದೆ ಯುಪಿಐ. ಅದುವೇ ಯುಪಿಐನ ಜಾದೂ ಆಗಿದೆ!

ಭಾರತದಲ್ಲಷ್ಟೇ ಅಲ್ಲ, ವಿವಿಧ ದೇಶಗಳಲ್ಲೂ ಭಾರತ ಮೂಲದ ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್ (ಯುಪಿಐ) ಪರಿಚಯವಾಗಿದೆ. ವಿದೇಶಗಳ ಪ್ರಮುಖ ನಾಯಕರೇ ಭಾರತದ ಯುಪಿಐ ಪಾವತಿ ವ್ಯವಸ್ಥೆಯ ಸರಳತೆಗೆ ಮಾರುಹೋಗಿದ್ದಾರೆ. ಫ್ರಾನ್ಸ್ ಅಧ್ಯಕ್ಷರು, ಜರ್ಮನಿ ಪ್ರಮುಖರು, ಸಿಂಗಪುರ ಪ್ರಧಾನಿ ಭಾರತಕ್ಕೆ ಭೇಟಿ ನೀಡಿದ್ದಾಗ ಯುಪಿಐ ಪಾವತಿ ವ್ಯವಸ್ಥೆಯನ್ನು ಸ್ವತಃ ಕಂಡು ಅದರ ವೇಗಗತಿ ಪಾವತಿಗೆ ಹುಬ್ಬೇರಿಸಿದ್ದಾರೆ.

ಹಣ ಪಾವತಿಯ ಸರಾಗ ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅದರ ಪರಿಣಾಮವಾಗಿಯೇ ವಿವಿಧ ಏಳು ದೇಶಗಳಲ್ಲಿ ಯುಪಿಐ ವ್ಯವಸ್ಥೆ ಜಾರಿಗೊಳ್ಳುವುದು ಸಾಧ್ಯವಾಗಿದೆ. ಜುಲೈ ತಿಂಗಳಲ್ಲಿ ಯುಪಿಐ ವಹಿವಾಟು ಪ್ರಮಾಣ ದಾಖಲೆ ಮಟ್ಟದಲ್ಲಿ ಏರಿಕೆ ಕಂಡಿದ್ದು, 1947 ಕೋಟಿಯಷ್ಟಕ್ಕೆ ಮುಟ್ಟಿದೆ. ಅಂದರೆ ಜುಲೈ ತಿಂಗಳಲ್ಲಿ ದೇಶದ ಜನರು 25.08 ಲಕ್ಷ ಕೋಟಿ ರು.ಗಳಷ್ಟು ಖರೀದಿ ಮತ್ತು ಪಾವತಿ ವಹಿವಾಟುಗಳನ್ನು ಯುಪಿಐ ಪಾವತಿ ಮಾರ್ಗದಲ್ಲಿಯೇ ನಡೆಸಿದ್ದಾರೆ ಎಂಬುದು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯ(ಎನ್‌ಪಿಸಿಐ)ದ ದತ್ತಾಂಶದಿಂದ ತಿಳಿದು ಬರುತ್ತದೆ.

ಇದಕ್ಕೂ ಮುನ್ನ ಇದೇ ವರ್ಷದ ಮೇ ತಿಂಗಳಲ್ಲಿ 25.14 ಲಕ್ಷ ಕೋಟಿ ರು.ಗಳಷ್ಟು ಪಾವತಿ ಯುಪಿಐ ಮೂಲಕ ನಡೆದಿದ್ದು, ಅದು ಮೊದಲ ದಾಖಲೆಯಾಗಿದೆ. ಆದರೆ, ವಹಿವಾಟು ಸಂಖ್ಯೆ 1867 ಕೋಟಿಯಷ್ಟಿತ್ತು. ಹಾಗಾಗಿ, ಜುಲೈ ತಿಂಗಳಲ್ಲಿ ನಡೆದಿರುವ ವಹಿವಾಟೇ ದಾಖಲೆ ಪ್ರಮಾಣದ್ದಾಗಿದೆ.

ಮೊದಲಿಗೆ ಸವಾಲಿನ ರೀತಿ ಕಂಡಿದ್ದ, ಕಠಿಣ ಎನಿಸಿದ್ದ ಡಿಜಿಟಲ್ ಪಾವತಿ ಈಗ ದೇಶದ ಜನರಿಗೆ ಸಲೀಸೆನಿಸಿದೆ. ಸಣ್ಣ ಪುಟ್ಟದಕ್ಕೂ ಜನರು ಮೊಬೈಲ್ ಫೋನ್ ಹೊರ ತೆಗೆದು ಕ್ಷಣ ಮಾತ್ರದಲ್ಲಿ ಹಣ ಪಾವತಿ ಮಾಡುವುದನ್ನೇ ರೂಢಿಯಾಗಿಸಿಕೊಂಡಿದ್ದಾರೆ. 5 ರು.ಪಾವತಿ ಮಾಡಬೇಕಿದ್ದರೂ ಡಿಜಿಟಲ್ ಸಿಸ್ಟಂಗೇ ಮೊರೆ ಹೋಗುತ್ತಿದ್ದಾರೆ. ಹಾಗಾಗಿ, ಮಾರುಕಟ್ಟೆಯಲ್ಲಿ ನೋಟುಗಳ ಬಳಕೆ ಪ್ರಮಾಣ ಇಲ್ಲವೇ ಇಲ್ಲ ಎನ್ನುವಷ್ಟು ಅತ್ಯಂತ ಕಡಿಮೆ ಇದೆ.

**ನಿತ್ಯಬದುಕಿನ ಭಾಗ:** ಯುಪಿಐ ಮೂಲಕ ವಹಿವಾಟು ನಡೆಯುತ್ತಿರುವುದರ ಪ್ರಮಾಣ ದಿನೇ ದಿನೇ ಹೆಚ್ಚುತ್ತಲೇ ಇದೆ. ಜನರಿಗೆ ಅದು ನಿತ್ಯದ ಬದುಕಿನ ಭಾಗವೇ ಆಗಿಬಿಟ್ಟಿದೆ. ಮೊದಲಿಗೆ ಡಿಜಿಟಲ್ ಪಾವತಿಗೆ ಅಂಜುತ್ತಿದ್ದ ಗ್ರಾಮೀಣ ಭಾಗದ ಜನರೂ ಈಗ ಯುಪಿಐ ಮೂಲಕ ಹಣ ಪಾವತಿ ಮಾಡುವುದನ್ನು ರೂಢಿಸಿಕೊಂಡಿದ್ದಾರೆ. ಸಣ್ಣ ಪುಟ್ಟ ವ್ಯಾಪಾರಿಗಳಿಗೂ ಗ್ರಾಹಕರ ಜತೆ ಡಿಜಿಟಲ್ ಪಾವತಿ ವ್ಯವಸ್ಥೆಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿದೆ. ಪರಿಣಾಮ, ನೋಟು-ನಾಣ್ಯಗಳ ಬಳಕೆ ಬಹಳಷ್ಟು ಕಡಿಮೆಯಾಗಿದೆ. ಡಿಜಿಟಲ್ ಪಾವತಿ ವ್ಯವಸ್ಥೆ ಈ ಪರಿಯಲ್ಲಿ ಜನಪ್ರಿಯವಾಗುವುದರಲ್ಲಿ ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್(ಯುಪಿಐ) ಪಾತ್ರ ಬಹಳ ಪ್ರಮುಖವಾಗಿದೆ.

ಯುಪಿಐ ಎಂಬುದು ಒಟ್ಟಾರೆ ಡಿಜಿಟಲ್ ಪಾವತಿ ವ್ಯವಸ್ಥೆಯ ಬೆನ್ನೆಲುಬು ಆಗಿದೆ. ದೇಶದ ಆರ್ಥಿಕ ಬೆಳವಣಿಗೆಯಲ್ಲಿಯೂ ಯುಪಿಐನ ಕೊಡುಗೆ ಗಮನಾರ್ಹವಾಗಿದೆ ಎಂದು ಹಣಕಾಸು ಮಾರು ಕಟ್ಟೆ ತಜ್ಞ ದಿಲಿಪ್ ಮೋದಿ ಎಂಬವರು ಹೇಳಿದ್ದಾರೆ.

**ವಿದೇಶದಲ್ಲೂ ಜನಪ್ರಿಯ:** ಯುಪಿಐ ಪಾವತಿ ವ್ಯವಸ್ಥೆಯನ್ನು ಭಾರತವಷ್ಟೇ ಅಲ್ಲದೇ, ಹಲವಾರು ದೇಶಗಳೂ ಬಹಳವಾಗಿ ಮೆಚ್ಚಿಕೊಂಡು ತಮ್ಮ ದೇಶದಲ್ಲಿಯೂ ಅಳವಡಿಸಿಕೊಂಡಿವೆ. ಅವುಗಳ ಸಾಲಿನಲ್ಲಿ ಫ್ರಾನ್ಸ್, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ), ಸಿಂಗಾಪುರ, ಶ್ರೀಲಂಕಾ, ಭೂತಾನ್, ನೇಪಾಳ, ಮಾರಿಷಸ್ ಸೇರಿವೆ.

ಫ್ರಾನ್ಸ್‌ನಲ್ಲಿ ಯುಪಿಐ ಸಿಸ್ಟಂ ಅಳವಡಿಕೆಯು ಯೂರೋಪ್ ಒಕ್ಕೂಟಕ್ಕೆ ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆಯ ಮೊದಲ ಪ್ರವೇಶವಾಗಿದೆ. ಯುಪಿಐ ಪಾವತಿ ವ್ಯವಸ್ಥೆ ವಿದೇಶಗಳಲ್ಲೂ ಲಭ್ಯವಾಗಿರುವುದರಿಂದ ಭಾರತದ ಪ್ರವಾಸಿಗರಿಗಂತೂ ಬಹಳ ಅನುಕೂಲವಾಗಿದೆ. ವಿದೇಶ ಪ್ರವಾಸ ಕಾಲದಲ್ಲಿ ಹಣ ಪಾವತಿಯನ್ನು ಭಾರತದ ಪ್ರವಾಸಿಗರಿಗೆ ಸರಳಗೊಳಿಸಿದೆ.

**ಆರಂಭದ ಕಷ್ಟ ಈಗಿಲ್ಲ:** ಡಿಜಿಟಲ್ ಪಾವತಿ ಕ್ರಮ ದೇಶದಲ್ಲಿ ಮೊದಲಿಗೆ ಶುರುವಾದಾಗ ಪ್ರತಿನಿತ್ಯವೂ ವಹಿವಾಟು ವಿಫಲವಾಗಿರುವ ಬಗ್ಗೆ ದೂರುಗಳು ಬರುತ್ತಿದ್ದವು. ಡಿಜಿಟಲ್ ಪಾವತಿ ಮಾಡಿದವರಿಗೆ ನಿಮ್ಮ ಬ್ಯಾಂಕ್ ಖಾತೆಯಿಂದ..... ಹಣ ಕಡಿತವಾಗಿದೆ ಎಂಬ ಸಂದೇಶವೇನೂ (ಎಸ್ಎಂಎಸ್) ಮೊಬೈಲ್ ಫೋನ್‌ಗೆ ಬಂದಿರುತ್ತಿತ್ತು. ಆದರೆ, ಹಣ ತಲುಪಬೇಕಾದವರ ಖಾತೆಗೆ ಜಮಾ ಆಗಿರುತ್ತಿರಲಿಲ್ಲ. ಮಧ್ಯದಲ್ಲಿಯೇ ಡಿಜಿಟಲ್ ವಹಿವಾಟಿನಲ್ಲಿಯೋ, ನೆಟ್‌ವರ್ಕ್‌ನಲ್ಲಿಯೋ ಸಮಸ್ಯೆಯಾಗಿ ಹಣ ನಿಗದಿತ ವ್ಯಕ್ತಿ/ ಖಾತೆಗೆ ವರ್ಗಾವಣೆ ಆಗಿರುತ್ತಿರಲಿಲ್ಲ. ಆಗ ಹಣ ಪಾವತಿ ಮಾಡಿದವರು ಡಿಜಿಟಲ್ ಪೇಮೆಂಟ್ ವ್ಯವಸ್ಥೆಯ ನಿರ್ವಾಹಕ ಕಂಪನಿಗೆ ಆನ್‌ಲೈನ್ ಮೂಲಕವೇ ದೂರು ದಾಖಲಿಸಬೇಕಿತ್ತು.


ಕಂಪನಿಯ ಕಾಲ್ ಸೆಂಟರ್‌ನಿಂದಲೋ, ಸ್ವಯಂಚಾಲಿತ ವ್ಯವಸ್ಥೆಯಿಂದಲೋ ಅಡಚಣೆಗಾಗಿ ಕ್ಷಮಿಸಿ, ನಿಮ್ಮ ಡಿಜಿಟಲ್ ಪಾವತಿ ಪ್ರಕ್ರಿಯೆ ವಿಫಲವಾಗಿದೆ. ನಿಮ್ಮ ಖಾತೆಯಿಂದ ಕಡಿತವಾಗಿರುವ...... ಮೊತ್ತ 72 ಗಂಟೆಗಳಲ್ಲಿ ಮರಳಿ ನಿಮ್ಮ ಖಾತೆಗೆ ಜಮಾ ಆಗಲಿದೆ ಎಂಬ ಉದ್ದದ ಸಂದೇಶ ಬರುವುದು ಸಾಮಾನ್ಯವಾಗಿತ್ತು. ಆ ಬಳಿಕವೂ ಡಿಜಿಟಲ್ ಪಾವತಿ ಮಾಡಿದವರು, 3 ದಿನಗಳವರೆಗೂ ತಮ್ಮ ಬ್ಯಾಂಕ್ ಖಾತೆಯಿಂದ ಕಡಿತವಾದ ಮೊತ್ತ ವಾಪಸ್ ಬಂದಿತೇ, ಇಲ್ಲವೇ ಎಂಬುದನ್ನು ಪದೇ ಪದೇ ಪರಿಶೀಲಿಸಬೇಕಾಗಿ ಬರುತ್ತಿತ್ತು.

ಇಂಥ ಪಾವತಿ ವಿಫಲ ಎಂಬ ಡಿಜಿಟಲ್ ಪಾವತಿಯ ಸಮಸ್ಯೆಯಿಂದಾಗಿ ದೊಡ್ಡ ಮೊತ್ತವನ್ನು ಪಾವತಿಸಿದವರು, ಹಣ ವರ್ಗಾವಣೆ ಮಾಡಿದವರು ಮೂರು ದಿನಗಳ ಕಾಲವೂ ಆತಂಕದಲ್ಲೇ ಇರಬೇಕಾಗಿ ಬರುತ್ತಿತ್ತು. ಡಿಜಿಟಲ್ ಪಾವತಿ ಬಳಕೆದಾರರಲ್ಲಿ ಕೆಲವರಾದರೂ ಹೀಗೆ ಪಾವತಿ ವಿಫಲವಾದ ಸಂದರ್ಭಗಳಲ್ಲಿ ಕೆಲವೊಮ್ಮೆ ನಿದ್ರೆ, ನೆಮ್ಮದಿಯನ್ನೂ ಕಳೆದುಕೊಂಡಿರುವ ಉದಾಹರಣೆ ಗಳಿವೆ.

ಯುನಿಫೈಡ್ ಪೇಮೆಂಟ್ ಇಂಟರ್ ಫೇಸ್(ಯುಪಿಐ) ಪಾವತಿ ವ್ಯವಸ್ಥೆ ದೇಶದಲ್ಲಿ ಜಾರಿಗೊಂಡ ಬಳಿಕ ಇಂತಹ ಪಾವತಿ ವಿಫಲ ಸಮಸ್ಯೆ ಎದುರಾಗುವುದು ತಪ್ಪಿದೆ. ಜನರೂ ಬಹಳ ನಂಬಿಕೆಯಿಂದಲೇ ಯುಪಿಐ ಆಧಾರಿತ ಡಿಜಿಟಲ್ ಪಾವತಿ ವ್ಯವಸ್ಥೆಗೆ ಮಾರು ಹೋಗಿದ್ದಾರೆ. ಲಕ್ಷ ರು. ಮೊತ್ತವನ್ನೂ ಡಿಜಿಟಲ್ ಪಾವತಿ ಮೂಲಕವೇ ಮಾಡುವಷ್ಟು ಯುಪಿಐ ವ್ಯವಸ್ಥೆಯ ಬಗೆಗೆ ದೃಢ ನಂಬಿಕೆ ಇಟ್ಟಿದ್ದಾರೆ.

**ಬ್ಯಾಂಕ್‌ಗಳೂ ನಿರಾಳ:** ಬಳಕೆದಾರರಿಗಷ್ಟೇ ಅಲ್ಲ, ಯುಪಿಐ ವ್ಯವಸ್ಥೆ ಜಾರಿಗೆ ಬಂದಾಗಿನಿಂದ, ಅದರ ಬಳಕೆ ಹೆಚ್ಚಿದಾಗಿನಿಂದ ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿನ ಸೇವಾದಾರ ಸಂಸ್ಥೆಗಳಿಗೂ, ಬ್ಯಾಂಕ್‌ಗಳಿಗೂ ಒತ್ತಡ, ಆತಂಕ ತಪ್ಪಿದೆ. ದೂರುಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆಯಾಗಿವೆ. ಡಿಜಿಟಲ್ ಹಣ ಪಾವತಿ ಅತ್ಯಂತ ಸುರಕ್ಷಿತ ಎನಿಸಿದೆ. ಸರಳ ಅಷ್ಟೇ ಸರಾಗ ಎನಿಸಿದೆ. ಹಾಗಾಗಿ ಯುಪಿಐ ವ್ಯವಸ್ಥೆಯನ್ನು ಆಧರಿಸಿರುವ ಬ್ಯಾಂಕಿಂಗ್ ವ್ಯವಸ್ಥೆ, ಸೇವಾ ಸಂಸ್ಥೆಗಳು ಈಗ ಬಹಳ ನಿರಾಳವಾಗಿವೆ. ಇದೇ ಕಾರಣದಿಂದಾಗಿ ಯುಪಿಐ ಬಳಕೆದಾರರಿಗೂ ಸೇವಾ ಸಂಸ್ಥೆಗಳು ಹಲವು ಅನುಕೂಲಗಳನ್ನು ಈಗ ಹೊಸದಾಗಿ ಪರಿಚಯಿಸುತ್ತಿವೆ.

**ಜೂನ್‌ನಲ್ಲಿ ವಹಿವಾಟು ಇಳಿಕೆ:** 2025 ರ ಜೂನ್ ನಲ್ಲಿನ ನಡೆದ ಯುಪಿಐ ಪಾವತಿ ವಹಿವಾಟು ಮೇ ತಿಂಗಳಿನಲ್ಲಿ ನಡೆದಿದ್ದಕ್ಕಿಂತಲೂ ಕಡಿಮೆ ಪ್ರಮಾಣವಾಗಿದೆ. ಜೂನ್‌ನಲ್ಲಿ 1839 ಕೋಟಿಯಷ್ಟು ಯುಪಿಐ ವಹಿವಾಟು ನಡೆದಿದೆ. ಹೀಗೆ ಡಿಜಿಟಲ್ ಮಾರ್ಗದಲ್ಲಿ ಪಾವತಿಯಾದ ಮೊತ್ತದ ಪ್ರಮಾಣ 25.08 ಲಕ್ಷ ಕೋಟಿ ರು. ಗಳಷ್ಟಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ, ಅಂದರೆ, 2024ರ ಜೂನ್‌ನಲ್ಲಿ ಯುಪಿಐ ವಹಿವಾಟು ಮೊತ್ತ 20.64 ಲಕ್ಷ ಕೋಟಿ ರು. ಗಳಷ್ಟಾಗಿತ್ತು. ಆ ಲೆಕ್ಕದಲ್ಲಿ ಒಂದು ವರ್ಷದ ಅಂತರದಲ್ಲಿ ಯುಪಿಐ ಪಾವತಿ ವ್ಯವಸ್ಥೆಯಲ್ಲಿನ ವಹಿವಾಟು ಮೊತ್ತದಲ್ಲಿ 4.40 ಲಕ್ಷ ಕೋಟಿ ರು. ಗಳಷ್ಟು ಹೆಚ್ಚಳವಾಗಿರುವುದು ಕಂಡುಬಂದಿದೆ. ಅಂದರೆ, ಡಿಜಿಟಲ್ ಪಾವತಿಯ ಪ್ರಮಾಣದಲ್ಲಿ ವರ್ಷದಿಂದ ವರ್ಷಕ್ಕೆ ಶೇ.21ರಷ್ಟು ಹೆಚ್ಚಳ ಕಂಡುಬಂದಂತಾಗಿದೆ.




**ಭಿಕ್ಷುಕರ ಬಳಿಯೂ..:** ಡಿಜಿಟಲ್ ಪಾವತಿ ವ್ಯವಸ್ಥೆ ಮೊದಲಿಗೆ ಪರಿಚಯವಾದಾಗ ದೊಡ್ಡ ದೊಡ್ಡ ಷಾಪಿಂಗ್ ಮಾಲ್‌ಗಳಲ್ಲಷ್ಟೇ ಕಾಣಬಂದಿತು. ನಂತರದಲ್ಲಿ ಮೆಡಿಕಲ್ ಸ್ಟೋರ್, ದಿನಸಿ ಅಂಗಡಿಗಳವರೂ ಬಳಸಲಾರಂಭಿಸಿದರು. ಈಗ ರಸ್ತೆ ಬದಿ ತರಕಾರಿ ಮಾರಾಟಗಾರರು, ತಳ್ಳುಗಾಡಿ ವ್ಯಾಪಾರಿಗಳೂ ಕ್ಯೂಆರ್ ಕೋಡ್ ಇಟ್ಟುಕೊಂಡಿದ್ದಾರೆ. ಅಷ್ಟೇ ಏಕೆ, ಟ್ರಾಫಿಕ್ ಸಿಗ್ನಲ್‌ಗಳಲ್ಲಿ, ರೈಲುಗಳಲ್ಲಿ ಎದುರಾಗುವ ಭಿಕ್ಷುಕರ ಬಳಿಯೂ ಕ್ಯೂಆರ್ ಕೋಡ್‌ನ ಚಿಕ್ಕ ಬೋರ್ಡ್ ಇರುತ್ತದೆ. ಯಾರಾದರೂ ಚಿಲ್ಲರೆ ಇಲ್ಲ ಎಂದು ಹೇಳಿದರೆ, ಡಿಜಿಟಲ್ ಪೇ ಮಾಡಬಹುದು ಸಾ ಎಂದು ಕ್ಯೂಆರ್ ಕೋಡ್ ಫಲಕವನ್ನು ಕೈಚೀಲದಿಂದ ಹೊರತೆಗೆದು ಹಿಡಿಯುತ್ತಾರೆ. ಅಷ್ಟರ ಮಟ್ಟಿಗೆ ಕ್ಯೂಆರ್ ಕೋರ್ಡ್ ಭಾರತದಲ್ಲಿ ಸರ್ವಾಂತರ್ಯಾಮಿ ಆಗಿಬಿಟ್ಟಿದೆ.

**ಆರ್‌ಬಿಐನ ಕೂಸು:** ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯ(ಎನ್‌ಪಿಸಿಐ) ಭಾರತದಲ್ಲಿನ ಡಿಜಿಟಲ್ ಪಾವತಿ ವ್ಯವಸ್ಥೆಯ ಬೆನ್ನೆಲು ಬಾಗಿದೆ. ಎನ್‌ಪಿಸಿಐ ಎಂಬುದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತು ಭಾರತದ ಬ್ಯಾಂಕ್‌ಗಳ ಸಂಘಟನೆ(ಐಬಿಎ)ಯ ಜಂಟಿ ಪ್ರಯತ್ನದ ಕೂಸು. ಭಾರತದಲ್ಲಿನ ಹತ್ತಾರು ಬ್ಯಾಂಕ್‌ಗಳ ನಡುವಿನ ಸಂಪರ್ಕವನ್ನು (ನೆಟ್ ವರ್ಕ್) ಒಂದೇ ಜಾಲದಲ್ಲಿ ತಂದು ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಸರಾಗಗೊಳಿಸುವುದಕ್ಕೆ ಸಾಧ್ಯವಾಗಿದ್ದೇ ಎನ್‌ಪಿಸಿಐ ರಚನೆಯಿಂದ. ಎನ್‌ಪಿಸಿಐ ಭಾರತದಲ್ಲಿನ ವಿವಿಧ ಬ್ಯಾಂಕ್ ಗಳ ನಡುವಿನ ಒಟ್ಟಾರೆ ಡಿಜಿಟಲ್ ಪಾವತಿ ವ್ಯವಸ್ಥೆಯಲ್ಲಿನ ಹಣದ ವಿನಿಮಯ ವಹಿವಾಟನ್ನು ಅತ್ಯಂತ ವ್ಯವಸ್ಥಿತವಾಗಿ ನಿರ್ವಹಣೆ ಮಾಡುತ್ತಿದೆ. ಅಷ್ಟೇ ಸರಾಗವಾಗಿ ಹಾಗೂ ಕ್ಷಿಪ್ರಗತಿಯಲ್ಲಿ ನಡೆಸಿ ಕೊಡುತ್ತಿದೆ.

ಈ ರೀತಿಯಲ್ಲಿ ಹಣದ ವರ್ಗಾವಣೆ ಕ್ಷಿಪ್ರಗತಿಯಲ್ಲಿ ನಡೆಸುವುದಕ್ಕಾಗಿ, ಅದೂ ರಿಯಲ್ ಟೈಮ್ ಪೇಮೆಂಟ್ಸ್ ಯಥಾ ರೀತಿ ನಡೆಯುವುದಕ್ಕಾಗಿ ಯುಪಿಐ ವ್ಯವಸ್ಥೆಯನ್ನು ಎನ್‌ಪಿಸಿಐ ಅವಲಂಬಿಸಿದೆ ಎಂಬುದು ಉಲ್ಲೇಖಾರ್ಹ.

**ಬ್ಯಾಲೆನ್ಸ್ ಚೆಕ್‌ಗೆ ಮಿತಿ!:** ಮೊದಲೆಲ್ಲಾ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇದೆ ಎಂಬುದನ್ನು ತಿಳಿಯಲು ಖಾತೆ ಇರುವ ಬ್ಯಾಂಕ್ ಶಾಖೆಗೇ ಹೋಗಬೇಕಿತ್ತು. ಇಲ್ಲವೇ ಬ್ಯಾಂಕ್‌ನ ಎಟಿಎಂ ಘಟಕಕ್ಕೆ ಡೆಬಿಟ್ ಕಾರ್ಡ್ ಸಮೇತ ತೆರಳಿ ಸಾಲಿನಲ್ಲಿ ನಿಂತು ಪರಿಶೀಲಿಸಬೇಕಿತ್ತು. ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿ ನಂತರ ಜನರಿಗೆ ಈ ಸಮಸ್ಯೆ ತಪ್ಪಿತು. ತಮ್ಮ ಮೊಬೈಲ್‌ನಲ್ಲಿಯೇ ಎಲ್ಲೆಂದರಲ್ಲಿ, ಯಾವುದೇ ಸಮಯದಲ್ಲಿ (ಅರ್ಧ ರಾತ್ರಿಯಲ್ಲಿ ಕೂಡಾ) ತಮ್ಮ ಬ್ಯಾಂಕ್ ಖಾತೆಯಲ್ಲಿನ ಶಿಲ್ಕು (ಬ್ಯಾಲೆನ್ಸ್) ಎಷ್ಟಿದೆ ಎಂಬುದನ್ನು ಪರಿಶೀಲಿಸಲು ಸಾಧ್ಯವಾಯಿತು. ಆದರೆ, ಇದುವರೆಗೂ ಹೀಗೆ ಬ್ಯಾಲೆನ್ಸ್ ಚೆಕ್ ಸೌಲಭ್ಯವನ್ನು ದಿನದಲ್ಲಿ ಅದೆಷ್ಟೇ ಬಾರಿಯಾದರೂ ಬಳಸಬಹುದಾಗಿತ್ತು. ಆದರೆ, ಈಗ ಡಿಜಿಟಲ್ ಪಾವತಿ ಸೇವಾ ಅಪ್ಲಿಕೇಷನ್ ಒದಗಿಸಿರುವ ಸಂಸ್ಥೆಗಳು ಒಂದು ದಿನದಲ್ಲಿ ಬ್ಯಾಲೆನ್ಸ್ ಚೆಕ್ ಮಾಡುವ ಅವಕಾಶಕ್ಕೆ ಮಿತಿ ವಿಧಿಸಿವೆ. ಡಿಜಿಟಲ್ ಪಾವತಿ ವ್ಯವಸ್ಥೆ ಬಳಕೆದಾರರು ಈಗ ದಿನದಲ್ಲಿ 50 ಬಾರಿಯಷ್ಟೇ ತಮ್ಮ ಖಾತೆಯಲ್ಲಿನ ಬ್ಯಾಲೆನ್ಸ್ ಚೆಕ್ ಮಾಡಬಹುದಾಗಿದೆ. ಬ್ಯಾಂಕ್‌ನ ಸರ್ವರ್‌ಗಳ ಮೇಲೆ ಹೆಚ್ಚು ಹೊರೆ ಬೀಳುವುದು, ನೆಟ್‌ವರ್ಕ್‌ನ ಮೇಲಿನ ಒತ್ತಡ ಹೆಚ್ಚುವುದನ್ನು ತಪ್ಪಿಸಲೆಂದೇ ಈ ಮಿತಿ ವಿಧಿಸಲಾಗಿದೆ ಎಂದು ಡಿಜಿಟಲ್ ಪಾವತಿ ವ್ಯವಸ್ಥೆಯ ಸೇವಾ ಕಂಪನಿಗಳು ತಿಳಿಸಿವೆ.

– ಬಿ.ವಿ.ಮಹೇಶ್ ಚಂದ್ರ

### ದಿನನಿತ್ಯ ಬದುಕಿನ ಭಾಗ

- ಜನರಿಗೆ ಅದು ನಿತ್ಯದ ಬದುಕಿನ ಭಾಗವೇ ಆಗಿಬಿಟ್ಟಿದೆ.
- ಮೊದಲಿಗೆ ಡಿಜಿಟಲ್ ಪಾವತಿಗೆ ಅಂಜುತ್ತಿದ್ದ ಗ್ರಾಮೀಣ ಭಾಗದ ಜನರೂ ಈಗ ಯುಪಿಐ ಮೂಲಕ ಹಣ ಪಾವತಿ ಮಾಡುವುದನ್ನು ರೂಢಿಸಿಕೊಂಡಿದ್ದಾರೆ.
- ಸಣ್ಣ ಪುಟ್ಟ ವ್ಯಾಪಾರಿಗಳಿಗೂ ಗ್ರಾಹಕರ ಜತೆ ಡಿಜಿಟಲ್ ಪಾವತಿ ವ್ಯವಸ್ಥೆಗೆ ಹೊಂದಿಕೊಳ್ಳುವುದು ಅನಿವಾರ್ಯವಾಗಿದೆ.
- ಪರಿಣಾಮ, ನೋಟು-ನಾಣ್ಯಗಳ ಬಳಕೆ ಬಹಳಷ್ಟು ಕಡಿಮೆಯಾಗಿದೆ.
- ಡಿಜಿಟಲ್ ಪಾವತಿ ವ್ಯವಸ್ಥೆ ಈ ಪರಿಯಲ್ಲಿ ಜನಪ್ರಿಯವಾಗುವುದರಲ್ಲಿ ಯುನಿ ಫೈಡ್ ಪೇಮೆಂಟ್ ಇಂಟರ್ ಫೇಸ್(ಯುಪಿಐ) ಪಾತ್ರ ಬಹಳ ಪ್ರಮುಖವಾಗಿದೆ.
- ಯುಪಿಐ ಎಂಬುದು ಒಟ್ಟಾರೆ ಡಿಜಿಟಲ್ ಪಾವತಿ ವ್ಯವಸ್ಥೆಯ ಬೆನ್ನೆಲುಬು ಆಗಿದೆ.
- ದೇಶದ ಆರ್ಥಿಕ ಬೆಳವಣಿಗೆಯಲ್ಲಿಯೂ ಯುಪಿಐನ ಕೊಡುಗೆ ಗಮನಾರ್ಹವಾಗಿದೆ ಎಂದು ಹಣಕಾಸು ಮಾರುಕಟ್ಟೆ ತಜ್ಞ ದಿಲಿಪ್ ಮೋದಿ ಎಂಬವರು ಹೇಳಿದ್ದಾರೆ.

> ಭಾರತದಲ್ಲಿ ನಡೆಯುತ್ತಿರುವ ಒಟ್ಟಾರೆ ಡಿಜಿಟಲ್ ಪಾವತಿಯಲ್ಲಿ ಯುಪಿಐನ ಪಾಲು ಶೇ.85ರಷ್ಟು ದೊಡ್ಡ ಪ್ರಮಾಣದಾಗಿದೆ. ಜನರಿಗೆ ಮತ್ತು ವರ್ತಕರಿಗೆ ನಿತ್ಯದ ವ್ಯಾಪಾರ ವಹಿವಾಟಿನಲ್ಲಿನ ಹಣ ಪಾವತಿಯನ್ನು ಡಿಜಿಟಲ್ ಪಾವತಿ ವ್ಯವಸ್ಥೆ ಬಲು ಸರಾಗಗೊಳಿಸಿದೆ. ಅದರಲ್ಲೂ ಯುಪಿಐ ಸೌಲಭ್ಯ ಜಾರಿ ಬಳಿಕವಂತೂ ಡಿಜಿಟಲ್ ಪಾವತಿ ವ್ಯವಸ್ಥೆ ಅತ್ಯಂತ ವೇಗಗೊಂಡಿದೆ, ಬಹಳ ವಿಶ್ವಾಸಾರ್ಹವೆನಿಸಿದೆ.


## 14-9-2025 ದಿನ ಭವಿಷ್ಯ



**ಮೇಷ:** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ. ನೀವು ಇಂದು ಹಾಜರಾದ ಸಾಮಾಜಿಕ ಸಂತೋಷಕೂಟದಲ್ಲಿ ನೀವೇ ಕೇಂದ್ರಬಿಂದುವಾಗಿರುತ್ತೀರಿ.



**ವೃಷಭ:** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ನೀವು ಕಮಿಷನ್‌ಗಳಿಂದ ಡಿವಿಡೆಂಡ್‌ಗಳಿಂದ- ಅಥವಾ ರಾಯಧನಗಳಿಂದ ಪ್ರಯೋಜನ ಪಡೆಯುತ್ತೀರಿ. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ.




**ಮಿಥುನ:** ನೀವು ಮಾನಸಿಕವಾಗಿ ಮತ್ತು ದೈಹಿಕವಾಗಿ ಸ್ವಲ್ಪ ಸುಸ್ತನ್ನು ಅನುಭವಿಸಬಹುದು ನಿಮ್ಮ ಚೈತನ್ಯವನ್ನು ಹೆಚ್ಚಿಸಲು ಸ್ವಲ್ಪ ವಿಶ್ರಾಂತಿ ಮತ್ತು ಪೌಷ್ಟಿಕ ಆಹಾರ ಬಹಳ ಸಹಾಯ ಮಾಡುತ್ತದೆ. ಹಣಕಾಸು ಲಾಭ ಒಂದಕ್ಕಿಂತ ಹೆಚ್ಚು ಮೂಲಗಳಿಂದ ಬರುತ್ತದೆ. ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು.



**ಕರ್ಕಾಟಕ:** ಗಾಳಿಗೊಡ್ಡಿದ ಆಹಾರ ನಿಮಗೆ ಅನಾರೋಗ್ಯ ತರಬಹುದಾದ್ದರಿಂದ ಅವುಗಳನ್ನು ತಿನ್ನಬೇಡಿ. ಗಡಿಬಿಡಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ - ವಿಶೇಷವಾಗಿ ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ.



**ಸಿಂಹ:** ಮನೆಯ ಚಿಂತೆಗಳು ನಿಮಗೆ ಉದ್ವೇಗ ತರಬಹುದು. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ- ಆದ್ದರಿಂದ ನೀವು ಕಷ್ಟಪಟ್ಟುಗಳಿಸಿದ ನಿಮ್ಮ ಹಣವನ್ನು ಎಲ್ಲಿ ಹೂಡಬಯಸುತ್ತೀರೆನ್ನುವಲ್ಲಿ ಖಚಿತತೆಯಿರಲಿ. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು.



**ಕನ್ಯಾ:** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಲಾಭದಾಯಕ ವಾಗಬಹುದು. ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ ನೀವು ಇಂದು ಆ ಹೆಚ್ಚುವರಿ ಚೈತನ್ಯವನ್ನು ಹೊಂದಿರುತ್ತೀರಿ ಹಾಗೂ ಇದು ನಿಮ್ಮನ್ನು ನಿಮ್ಮ ಗುಂಪಿಗಾಗಿ ಸಮಾರಂಭವನ್ನು ಸಂಯೋಜಿಸುವಂತೆ ಮಾಡುತ್ತದೆ.



**ತುಲಾ:** ನಿಮ್ಮ ಸಂತೋಷದ ಪ್ರಕೃತಿ ಇತರರಿಗೆ ಸಂತೋಷ ತರುತ್ತದೆ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು-ಏಕೆ ಏನನ್ನಾದರೂ ಮಾಡಬಾರದು ಇದು ನಿಮ್ಮ ಗಳಿಕೆಯ ಶಕ್ತಿಯನ್ನು ಸುಧಾರಿಸುತ್ತದೆ. ನಿಮ್ಮ ಸಂಗಾತಿಯ ಆರೋಗ್ಯದ ಚಿಂತೆ ಉಂಟುಮಾಡಬಹುದು.



**ವೃಶ್ಚಿಕ:** ನಿಮ್ಮ ಅತ್ಯಂತ ಪ್ರೀತಿಯ ಕನಸು ನನಸಾಗುತ್ತದೆ. ಆದರೆ ತುಂಬಾ ಸಂತೋಷ ಸ್ವಲ್ಪ ಸಮಸ್ಯೆಗಳನ್ನು ಉಂಟುಮಾಡಬಹುದಾದ್ದರಿಂದ ನಿಮ್ಮ ಉತ್ಸಾಹವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ. ಮನೆಯ ಅಗತ್ಯವಾದ ವಸ್ತುಗಾಲ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ.



**ಧನು:** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ. ನೀವು ಅಪರೂಪಕ್ಕೆ ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ.



**ಮಕರ:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು. ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು.



**ಕುಂಭ:** ಒಬ್ಬ ಸಂತನ ಆಶೀರ್ವಾದದಿಂದ ಮನಶಾಂತಿ. ವ್ಯಾಪಾರವನ್ನು ಬಲಪಡಿಸಲು ಇಂದು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು. ಇದಕ್ಕಾಗಿ ನಿಮ್ಮ ಆಪ್ತ ನಿಮಗೆ ಆರ್ಥಿಕವಾಗಿ ಸಹಾಯ ಮಾಡಬಹುದು. ಕೆಲವರು ಅವರಿಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ನೀಡುವ ಭರವಸೆ ನೀಡುತ್ತಾರೆ ಕೇವಲ ಮಾತನಾಡುವ ಮತ್ತು ಯಾವುದೇ ಫಲಿತಾಂಶಗಳ ಜನರನ್ನು ಮರೆತುಬಿಡಿ.



**ಮೀನ:** ಸೃಜನಶೀಲ ಕೆಲಸ ನಿಮ್ಮನ್ನು ಶಾಂತವಾಗಿರಿಸುತ್ತವೆ. ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆಯನ್ನು ಹೊಂದಿದ್ದೀರಿ. ವೈಯಕ್ತಿಕ ಮತ್ತು ಗೌಪ್ಯವಾದ ಮಾಹಿತಿಯನ್ನು ಬಹಿರಂಗಪಡಿಸಬೇಡಿ. ಇಂದಿನ ದಿನ ಪ್ರೀತಿಯ ಬಣ್ಣಗಳಲ್ಲಿ ಮುಳುಗಿರುತ್ತದೆ ಆದರೆ ರಾತ್ರಿಯ ಸಮಯದಲ್ಲಿ ಯಾವುದೊ ಹಳೆಯ ವಿಷ್ಯದ ಬಗ್ಗೆ ನೀವು ಜಗಳವಾಡಬಹುದು.

# ಟ್ರಂಪ್ ಸುಂಕದ ಬರೆಗೆ ಜಿಎಸ್‌ಟಿ ಕಡಿತದ ಮುಲಾಮು

> ಸರಕುಗಳು ಮತ್ತು ಸೇವೆಗಳ ಮಾರಾಟ ಒಂದು ರಾಜ್ಯದ ಒಳಗೇ ನಡೆದರೆ ರಾಜ್ಯ ಮಾರಾಟ ತೆರಿಗೆ ಅನ್ವಯವಾಗುತ್ತದೆ. ಅದು ಅಂತಾರಾಜ್ಯ ಮಾರಾಟವಾದರೆ ಕೇಂದ್ರ ಮಾರಾಟ ತೆರಿಗೆ ಕೂಡಾ ಅನ್ವಯವಾಗುತ್ತದೆ. ಇಂಥ ತೆರಿಗೆಗಳ ದರಗಳು ರಾಜ್ಯದಿಂದ ರಾಜ್ಯಕ್ಕೆ ಪ್ರತ್ಯೇಕವಿದುದರಿಂದ ಕೈಗಾರಿಕೆಗಳ ಉತ್ಪಾದನಾ ವೆಚ್ಚ ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತಿತ್ತು.

ಅಂಶವೆಂದರೆ ದೇಶದ ಒಟ್ಟೂ ಉತ್ಪಾದನೆಯ ಶೇ.61ಕ್ಕಿಂತಲೂ ಹೆಚ್ಚು ಆಂತರಿಕ ಬೇಡಿಕೆಗೇ ಅಗತ್ಯವಿರುವುದರಿಂದ ರಫ್ತು ವ್ಯಾಪಾರದಲ್ಲಿ ಉಂಟಾಗಬಹುದಾದ ಸವಾಲುಗಳಿಂದ ನಮ್ಮ ಕೈಗಾರಿಕೆಗಳು ತಮ್ಮನ್ನು ರಕ್ಷಿಸಿಕೊಳ್ಳಬಲ್ಲವು. ಆದ್ದರಿಂದ ಯಾವುದೇ ಒಂದು ರಾಷ್ಟ್ರ ಸುಂಕ ಹೆಚ್ಚು ಮಾಡಿ ಭಾರತದ ಆರ್ಥಿಕತೆಯನ್ನು ನಾಶಮಾಡುವೆ ಎಂದುಕೊಂಡರೆ ಅದು ಅವರ ಭ್ರಮೆ ಮಾತ್ರ.

56ನೇ ಜಿಎಸ್‌ಟಿ ಸಮಿತಿಯ ಸಭೆಯು ಅನುಮೋದಿಸಿದ ಜಿಎಸ್‌ಟಿ-2, ಅಮೆರಿಕದ ಸುಂಕ ಧಮಕಿಯಿಂದ ಭಾರತದ ಆರ್ಥಿಕತೆಯ ಮೇಲೆ ಆಗಬಹುದಾದ ದುಷ್ಪರಿಣಾಮಗಳಿಗೆ ಪರಿಣಾಮಕಾರಿ ಪ್ರತಿಬಂಧಕ ಎನ್ನುವುದರಲ್ಲಿ ಸಂಶಯವಿಲ್ಲ. ಎರಡು ಹಂತದ ತೆರಿಗೆ ಶ್ರೇಣಿ ಮತ್ತು ಒಂದು ಪಾಪ ಸರಕುಗಳ ಶ್ರೇಣಿ ಒಳಗೊಂಡಿರುವ ಜಿಎಸ್‌ಟಿ-2, ಕೇವಲ ತೆರಿಗೆ ದರ ಇಳಿಕೆಯಲ್ಲ.

ವ್ಯವಸ್ಥೆಯ ಆಮೂಲಾಗ್ರ ಪರಿಷ್ಕರಣೆ ಕೂಡಾ. ಪ್ರಧಾನಿಯವರ ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ದೀಪಾವಳಿ ಕೊಡುಗೆ ಎಂದಿದ್ದನ್ನು ನವರಾತ್ರಿಗೇ ನೀಡಿದ್ದು, ಪರಿಸ್ಥಿತಿಯನ್ನು ಎದುರಿಸಲು ದೇಶ ಸಿದ್ಧವಾಗಿರುವುದರ ಸ್ಪಷ್ಟ ಸಂದೇಶ. ಆದರೆ ವಿತ್ತಮಂತ್ರಿ ನಿರ್ಮಲಾ ಸೀತಾರಾಮನ್, ಜಿಎಸ್‌ಟಿ-2ಗೆ ಕಳೆದ ಒಂದೂವರೆ ವರ್ಷದಿಂದಲೇ ತಯಾರಿ ನಡೆದಿತ್ತು ಮತ್ತು ಟ್ರಂಪ್‌ರ ಸುಂಕಕ್ಕೂ ಇದಕ್ಕೂ ನೇರ ಸಂಬಂಧ ಇಲ್ಲ ಎಂದರು.

ಆದರೂ ಇಂಥ ಪ್ರಮುಖ ನಿರ್ಣಯ ಕೈಗೊಂಡ ಸಮಯ ಮತ್ತು ಸಂದರ್ಭ ಮಹತ್ವದ್ದು. ರಾಜತಾಂತ್ರಿಕತೆಯಲ್ಲಿ ಹೆಚ್ಚು ಮಾತನಾಡುವುದಕ್ಕಿಂತ ಕಾರ್ಯಗಳೇ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ ಎಂಬುದನ್ನು ಅದರಲ್ಲಿ ನುರಿತವರು ಮಾತ್ರ ತಿಳಿದಿರುತ್ತಾರೆ. ಹಾಗೆ ನೋಡಿದರೆ ಅಮೆರಿಕಕ್ಕೆ ಭಾರತದ ರಫ್ತ 87.4 ಬಿಲಿಯನ್ ಡಾಲರ್. ಅದು ದೇಶದ ಒಟ್ಟೂ ಉತ್ಪಾದನೆಯ ಶೇ.2ರಷ್ಟು ಮಾತ್ರ!

ಇನ್ನೊಂದು ಪ್ರಮುಖ ಅಂಶವೆಂದರೆ ದೇಶದ ಒಟ್ಟೂ ಉತ್ಪಾದನೆಯ ಶೇ.61ಕ್ಕಿಂತಲೂ ಹೆಚ್ಚು ಆಂತರಿಕ ಬೇಡಿಕೆಗೇ ಅಗತ್ಯವಿರುವುದರಿಂದ ರಫ್ತು ವ್ಯಾಪಾರದಲ್ಲಿ ಉಂಟಾಗಬಹುದಾದ ಸವಾಲುಗಳಿಂದ ನಮ್ಮ ಕೈಗಾರಿಕೆಗಳು ತಮ್ಮನ್ನು ರಕ್ಷಿಸಿಕೊಳ್ಳಬಲ್ಲವು. ಆದ್ದರಿಂದ ಯಾವುದೇ ಒಂದು ರಾಷ್ಟ್ರ ಸುಂಕ ಹೆಚ್ಚು ಮಾಡಿ ಭಾರತದ ಆರ್ಥಿಕತೆಯನ್ನು ನಾಶ ಮಾಡುವೆ ಎಂದು ಕೊಂಡರೆ ಅದು ಅವರ ಭ್ರಮೆ ಮಾತ್ರ.

**ಏನಿದು ಜಿಎಸ್‌ಟಿ?:** ಒಕ್ಕೂಟ ವ್ಯವಸ್ಥೆಯನ್ನು ಹೊಂದಿರುವ ಭಾರತದ ಸಂವಿಧಾನದ 265ನೇ ವಿಧಿಯನ್ವಯ ಯಾವುದೇ ತೆರಿಗೆಯನ್ನು ಸಂಸತ್ತು ಅಥವಾ ರಾಜ್ಯ ಶಾಸನ ಸಭೆಗಳು ಅಂಗೀಕರಿಸಿದ ಕಾಯಿದೆಗಳಡಿಯಲ್ಲೇ ವಿಧಿಸಬೇಕು. 246ನೇ ವಿಧಿ ಹಾಗೂ 7ನೇ ಪರಿಶಿಷ್ಟಗಳು ಕೇಂದ್ರ ಮತ್ತು ರಾಜ್ಯಗಳ ಪ್ರತ್ಯೇಕ ಯಾದಿ ಹಾಗೂ ಸಮಾನ ಯಾದಿಗಳನ್ನು ಒದಗಿಸುತ್ತವೆ.

ಸರಕುಗಳು ಮತ್ತು ಸೇವೆಗಳ ಮಾರಾಟ ಒಂದು ರಾಜ್ಯದ ಒಳಗೇ ನಡೆದರೆ ರಾಜ್ಯ ಮಾರಾಟ ತೆರಿಗೆ ಅನ್ವಯವಾಗುತ್ತದೆ. ಅದು ಅಂತಾರಾಜ್ಯ ಮಾರಾಟವಾದರೆ ಕೇಂದ್ರ ಮಾರಾಟ ತೆರಿಗೆ ಕೂಡಾ ಅನ್ವಯವಾಗುತ್ತದೆ. ಇಂಥ ತೆರಿಗೆಗಳ ದರಗಳು ರಾಜ್ಯದಿಂದ ರಾಜ್ಯಕ್ಕೆ ಪ್ರತ್ಯೇಕವಿದ್ದುದರಿಂದ ಕೈಗಾರಿಕೆಗಳ ಉತ್ಪಾದನಾ ವೆಚ್ಚ ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತಿತ್ತು. ಈ ಕಾರಣಕ್ಕೆ ಕೈಗಾರಿಕೆಗಳ ಸ್ಪರ್ಧಾ ಸಾಮರ್ಥ್ಯ ಮತ್ತು ಲಾಭಾರ್ಹತೆ ಬದಲಾಗುವುದರಿಂದ ಕೈಗಾರಿಕಾ ಅಭಿವೃದ್ಧಿಯಲ್ಲಿ ಭೌಗೋಳಿಕ ಅಸಮಾನತೆಗೆ ಕಾರಣವಾಗುತ್ತದೆ.

ಅಲ್ಲದೆ ಉತ್ಪಾದನೆಯ ವಿವಿಧ ಕಚ್ಚಾವಸ್ತುಗಳಿಗೆ ಪ್ರತ್ಯೇಕ ತೆರಿಗೆ ವಿಧಿಸುವುದರಿಂದ ಬಹುಹಂತದ ತೆರಿಗೆ ನೀಡಬೇಕಾಗುತ್ತದೆ. ಅಂಥ ತೆರಿಗೆಯನ್ನು ಅಂತಿಮ ತೆರಿಗೆ ಪಾವತಿಗೆ ಹೊಂದಾಣಿಕೆ ಮಾಡುವುದು ಹಿಂದಿನ ವ್ಯವಸ್ಥೆಯಲ್ಲಿ ಸರಳವಾಗಿರಲಿಲ್ಲ. ಈ ಗೊಂದಲಗಳನ್ನು ತೊಡೆದು ಹಾಕಿ ಒಂದು ದೇಶ ಒಂದೇ ತೆರಿಗೆ ಎಂಬ ಘೋಷವಾಕ್ಯದಡಿಗೆ ಎಲ್ಲಾ ರಾಜ್ಯಗಳಿಗೆ ಅನ್ವಯವಾಗುವಂತೆ ಸಮಾನ ತೆರಿಗೆ ದರ ಮತ್ತು ಪದ್ಧತಿಯನ್ನು ತರುವ ಉದ್ದೇಶದಿಂದ ಜಿಎಸ್‌ಟಿ ವ್ಯವಸ್ಥೆಯನ್ನು ಜುಲೈ 1, 2017 ರಿಂದ ದೇಶಾದ್ಯಂತ ಜಾರಿಗೆ ತರಲಾಯಿತು.

ಸರಕು ಮತ್ತು ಸೇವಾ ತೆರಿಗೆ ಎಂದು ಕರೆಯಲ್ಪಡುವ ಈ ತೆರಿಗೆಯು ಈ ಹಿಂದೆ ಇದ್ದ ಕೇಂದ್ರ ಮತ್ತು ರಾಜ್ಯ ಮಾರಾಟ ತೆರಿಗೆಯಲ್ಲದೆ ಇನ್ನಿತರ ಹಲವು ತೆರಿಗೆಗಳ ಬದಲಿಗೆ ತರಲಾದ ಅಪರೋಕ್ಷ ತೆರಿಗೆ ವ್ಯವಸ್ಥೆ.

**ಜಿಎಸ್‌ಟಿಯ ಇತಿಹಾಸ:** ಜಿಎಸ್‌ಟಿ ಜಾರಿ ಕುರಿತಂತೆ 2000ದ ವರ್ಷದಲ್ಲಿ ವಾಜಪೇಯಿ ಸರಕಾರ ಒಂದು ಸಮಿತಿಯನ್ನು ರಚಿಸಿತ್ತು. ನಂತರ ಬಂದ ಕಾಂಗ್ರೆಸ್ ಸರಕಾರ 2004ರಲ್ಲಿ ಈ ಕುರಿತು ಎಲ್ಲಾ ರಾಜ್ಯಗಳ ವಿತ್ತ ಸಚಿವರನ್ನೊಳಗೊಂಡ ಒಂದು ಅಧಿಕಾರಸ್ಥ ಸಮಿತಿಯನ್ನು ರಚಿಸಿತು. 2006ರಲ್ಲಿ ಅಂದಿನ ವಿತ್ತ ಸಚಿವ ಪಿ.ಚಿದಂಬರಂ, ತಮ್ಮ ಬಜೆಟ್ ಭಾಷಣದಲ್ಲಿ ಜಿಎಸ್‌ಟಿ ಜಾರಿ ಮಾಡುವ ಪ್ರಸ್ತಾಪ ಮಂಡಿಸಿದರು. 2011ರಲ್ಲಿ ಈ ಕುರಿತು 115ನೇ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ಮಂಡಿಸಲಾಯಿತಾದರೂ 15ನೇ ಲೋಕಸಭೆಯ ವಿಸರ್ಜನೆಯಿಂದಾಗಿ ಅದು ಜಾರಿಯಾಗಲಿಲ್ಲ.

ಅಂತಿಮವಾಗಿ ಮೋದಿ ಸರಕಾರ 2014ರಲ್ಲಿ ಮಂಡಿಸಿದ 122ನೇ ಸಂವಿಧಾನ ತಿದ್ದುಪಡಿ ವಿಧೇಯಕ 2016ರಲ್ಲಿ ಅಂಗೀಕೃತವಾಗಿ 2017 ಜುಲೈ 1ರಿಂದ ಕೇಂದ್ರ ಮತ್ತು ರಾಜ್ಯಗಳ ಜಿಎಸ್‌ಟಿ ಕಾಯಿದೆಗಳು ಜಾರಿಗೆ ಬಂದವು.

**ಯಾವೆಲ್ಲ ತೆರಿಗೆಗಳು ಜಿಎಸ್‌ಟಿಯಲ್ಲಿ ಒಳಗೊಂಡಿವೆ?:** ಸರಕು ಮತ್ತು ಸೇವೆಗಳ ಉತ್ಪಾದನೆ ಮತ್ತು ಪೂರೈಕೆಯ ಭಾಗವಾಗಿರುವ ವೆಚ್ಚಗಳ ಮೇಲೆ ಮಾತ್ರ ಜಿಎಸ್‌ಟಿ ಅನ್ವಯವಾಗುತ್ತದೆ ಮತ್ತು ಉತ್ಪಾದನೆ ಹಾಗೂ ಪೂರೈಕೆಯ ವಿವಿಧ ಹಂತಗಳುದ್ದಕ್ಕೂ ಇದನ್ನು ವಿಧಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ವಿವಿಧ ಅಬಕಾರಿ ತೆರಿಗೆಗಳು, ಸೇವಾ ತೆರಿಗೆ, ಸರ್ ಚಾರ್ಜ್ ಮತ್ತು ಸೆಸ್, ರಾಜ್ಯದ ಮೌಲ್ಯವರ್ಧಿತ ತೆರಿಗೆ, ಕೇಂದ್ರ ಮಾರಾಟ ತೆರಿಗೆ, ಐಷಾರಾಮಿ ತೆರಿಗೆ, ಪ್ರವೇಶ ತೆರಿಗೆ, ಮನರಂಜನಾ ತೆರಿಗೆ, ಮತ್ತು ಜಾಹೀರಾತು ತೆರಿಗೆಗಳು ಜಿಎಸ್‌ಟಿಯಲ್ಲಿ ವಿಲೀನವಾಗಿವೆ.

ಕಸ್ಟಮ್ಸ್ ಸುಂಕ, ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಕೇಂದ್ರ ಮತ್ತು ರಾಜ್ಯ ಮಾರಾಟ ತೆರಿಗೆ, ತಂಬಾಕು ಮತ್ತು ಅಲ್ಕೋಹಾಲ್ ಮೇಲಿನ ಅಬಕಾರಿ ಸುಂಕ ಇವೆಲ್ಲ ಜಿಎಸ್‌ಟಿಯಲ್ಲಿ ಒಳ ಗೊಂಡಿಲ್ಲ. ಸರಕು ಮತ್ತು ಸೇವೆಗಳ ಉತ್ಪಾದನೆ ಹಾಗೂ ಪೂರೈಕೆ ಎಲ್ಲಾ ಹಂತಗಳಿಗೆ ಮತ್ತು ಅಂತಿಮವಾಗಿ ಗ್ರಾಹಕರವರೆಗೆ ಒಂದೇ ವೇದಿಕೆಯಡಿಯಲ್ಲಿ ತೆರಿಗೆ ವಿಧಿಸುವುದರಿಂದ ಮತ್ತು ಅಂಥ ತೆರಿಗೆಯ ದರಗಳು ವಿವಿಧ ರಾಜ್ಯಗಳಿಗೆ ಸಮಾನವಾಗಿರುವುದರಿಂದ ತೆರಿಗೆ ಪಾವತಿ ಮತ್ತು ನಿಯಮಗಳ ಪಾಲನೆ ಸರಳವಾಗಿದೆ.

ಕೇಂದ್ರ-ರಾಜ್ಯಗಳ ನಡುವೆ ತೆರಿಗೆಯ ಹಂಚಿಕೆಯ ವ್ಯವಸ್ಥೆ ಪಾರದರ್ಶಕವಾಗಿದೆ. ತೆರಿಗೆ ವಂಚನೆಗೆ ಕಠಿಣ ಕ್ರಮಗಳನ್ನು ವಿಧಿಸುವ ಮೂಲಕ ಹೆಚ್ಚಿನ ತೆರಿಗೆ ಸಂಗ್ರಹ ಮತ್ತು ಆ ಮೂಲಕ ಸರಕಾರಕ್ಕೆ ಹೆಚ್ಚಿನ ಆದಾಯ ತರಲು ಸಹಾಯಕ. ಇ-ವೇಬಿಲ್ ವ್ಯವಸ್ಥೆಯಿಂದ ಪ್ರವೇಶ ಟೋಲ್‌ಗಳಲ್ಲಿ ಸರಕುಗಳ ಸಾಗಾಣಿಕೆಯ ಮೇಲೆ ನಿಯಂತ್ರಣ ಸುಲಭ. 1.5 ಕೋಟಿ ರುಪಾಯಿಗಳವರೆಗಿನ ವಹಿವಾಟು ಹೊಂದಿದವರಿಗೆ ಸರಳವಾದ ಸಂಯೋಜನೆ ಪದ್ಧತಿಯಲ್ಲಿ ತೆರಿಗೆ ಪಾವತಿಸಲು ಅವಕಾಶವಿದೆ.

**ಜಿಎಸ್‌ಟಿ-2ರ ಲಾಭಗಳೇನು?:** ಶೇ.5, ಶೇ.12, ಶೇ.18 ಮತ್ತು ಶೇ.28ರ ನಾಲ್ಕು ಹಂತದ ದರಗಳ ಬದಲಾಗಿ ಶೇ.5 ಮತ್ತು 18ರ ಎರಡು ಹಂತದ ಕಡಿಮೆದರದ ತೆರಿಗೆ ಸುಮಾರು 98 ಪ್ರತಿಶತ ಉತ್ಪನ್ನ ಮತ್ತು ಸೇವೆಗಳಿಗೆ ಅನ್ವಯವಾಗುವುದರಿಂದ ಅವುಗಳ ಉತ್ಪಾದನಾ ಮತ್ತು ಪೂರೈಕೆ ವೆಚ್ಚ ಕಡಿಮೆಯಾಗುತ್ತದೆ. ತಂಬಾಕು, ಮದ್ಯ, ಕೋಕಾ ಕೋಲಾದಂಥ ಪೇಯಗಳು, ಹೆಚ್ಚಿನ ದರದ ಕಾರುಗಳಂಥ ಪಾಪದ ಸರಕುಗಳಿಗೆ ಶೇ.40ರ ದರ ಅನ್ವಯಿಸುತ್ತದೆ.

ಹಾಲು, ಹಣ್ಣು, ತರಕಾರಿ, ಆರೋಗ್ಯವಿಮೆ, ಜೀವವಿಮೆಯಂಥ ಅನೇಕ ಜೀವನಾವಶ್ಯಕ ಸರಕು/ಸೇವೆಗಳಿಗೆ ಶೂನ್ಯ ತೆರಿಗೆ. ಪ್ಯಾಕ್ ಮಾಡಿದ ಆಹಾರ, ಔಷಧ, ಚಪ್ಪಲಿ, ಗೃಹಬಳಕೆಯ ವಸ್ತುಗಳು, ಇತರ ಸಾಮಾನ್ಯ ಬಳಕೆಯ ವಸ್ತುಗಳಿಗೆ ಶೇ.5, ಹೋಟೆಲ್ ಸೇವೆಗಳು, ದೂರಸಂಪರ್ಕ ಸೇವೆಗಳು, ಹಣಕಾಸು ಸೇವೆಗಳು, ಟಿ.ವಿ., ವಾಶಿಂಗ್-ಮಷಿನ್, ಲ್ಯಾಪ್‌ಟಾಪ್, 350 ಸಿ.ಸಿ.ಗಿಂತ ಕಡಿಮೆ ಸಾಮರ್ಥ್ಯದ ಮೋಟರ್ ಸೈಕಲ್, 1200 ಸಿ.ಸಿ.ಗಿಂತ ಕಡಿಮೆ ಸಾಮರ್ಥ್ಯದ ಕಾರುಗಳು ಮುಂತಾದವುಗಳಿಗೆ ಶೇ.18. ಶೇ.28ರ ದರದಲ್ಲಿದ್ದ ಬಹುತೇಕ ಸರಕುಗಳನ್ನು 18 ಅಥವಾ 5ಕ್ಕೆ ತರಲಾಗಿದ್ದು, 12ರ ದರದಲ್ಲಿದ್ದ ಎಲ್ಲಾ ಸರಕುಗಳು 5 ಅಥವಾ ಶೂನ್ಯದರಕ್ಕೆ ಬಂದಿವೆ.




ವಿಶೇಷವಾಗಿ ಸಿಮೆಂಟ್ ನಂಥ ಕಟ್ಟಡ ಸಾಮಗ್ರಿಗಳು, ವಾಹನಗಳು, ಕೃಷಿ ಉಪಕರಣಗಳು, ಶಸ್ತ್ರ ಚಿಕಿತ್ಸೆಯ ಉಪಕರಣಗಳು ಮುಂತಾದ ವಸ್ತುಗಳಿಗೆ ಭರ್ಜರಿ ತೆರಿಗೆ ಕಡಿತ ಮಾಡಲಾಗಿದೆ. ಜಿಎಸ್‌ಟಿ ದರಗಳು ಇಷ್ಟೊಂದು ಇಳಿಕೆಯಾಗಿರುವುದರಿಂದ ದೇಶದ ಆರ್ಥಿಕತೆಯಲ್ಲಿ 1.98 ಲಕ್ಷ ಕೋಟಿ ರುಪಾಯಿಗಳಷ್ಟು ಹಣದ ಹರಿವು ಹೆಚ್ಚಾಗಲಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ ನಡೆಸಿದ ಅಧ್ಯಯನ ವರದಿ ತಿಳಿಸಿದೆ.

ಜನರ ಕೈಯಲ್ಲಿ ಹಣದ ಪೂರೈಕೆ ಹೆಚ್ಚಾದಾಗ ತನ್ನಿಂದ ತಾನೇ ಸರಕು ಸೇವೆಗಳ ಬೇಡಿಕೆ ಹೆಚ್ಚಾಗುತ್ತದೆ ಮತ್ತು ಅದರಿಂದ ಉತ್ಪಾದನೆಯ ಮಟ್ಟವೂ ಹೆಚ್ಚಾಗುತ್ತದೆ. ಆದ್ದರಿಂದ ಜಿಎಸ್‌ಟಿ ದರದ ಇಳಿತವಾದರೂ ದೀರ್ಘಾವಧಿಯಲ್ಲಿ ಜಿಎಸ್‌ಟಿ ಆದಾಯ ಹೆಚ್ಚಾಗುತ್ತದೆ. ಇನ್‌ಪುಟ್ ಕ್ರೆಡಿಟ್ ವ್ಯವಸ್ಥೆಗೆ ಜಿಎಸ್‌ಟಿ ನೋಂದಣಿ ಕಡ್ಡಾಯವಾದ್ದರಿಂದ ಹೆಚ್ಚು ಉದ್ದಿಮೆಗಳು ನೋಂದಣಿಯಾಗುತ್ತವೆ ಮತ್ತು ದಾಖಲೆಗೆ ಸಿಗದ ವ್ಯವಹಾರಗಳ ಪ್ರಮಾಣ ಕಡಿಮೆಯಾಗಿ ತೆರಿಗೆಯ ಜಾಲ ಹೆಚ್ಚಲಿದೆ. ಅಲ್ಲದೆ ತೆರಿಗೆ ದರ ಇಳಿಕೆಯಾದಾಗ ತೆರಿಗೆ ವಂಚನೆಯ ಪ್ರಮಾಣ ಕಡಿಮೆಯಾಗಿ ಜಿಎಸ್‌ಟಿ ಅಲ್ಲದೆ ಆದಾಯಕರದ ಆದಾಯ ಕೂಡಾ ಹೆಚ್ಚಳವಾಗುತ್ತದೆ.

ದರದ ಇಳಿಕೆಯ ಜತೆಗೆ ತೆರಿಗೆ ಪದ್ಧತಿಯಲ್ಲಿ ಅನೇಕ ಬದಲಾವಣೆ ಮಾಡಲಾಗಿದೆ. ಉದಾಹರಣೆಗೆ ಕಟ್ಟಡ, ಯಂತ್ರೋಪಕರಣಗಳಂಥ ಆಸ್ತಿಗಳ ಮೇಲೆ ನೀಡಲಾದ ಜಿಎಸ್‌ಟಿಯ ಮೊತ್ತವನ್ನು ಕೂಡಾ ಮರಳಿ ಪಡೆಯುವ ಅನುವು ಕೈಗಾರಿಕೆಗಳಿಗೆ ಒಂದು ದೊಡ್ಡ ಲಾಭ.

ಇನ್‌ಪುಟ್ ಕ್ರೆಡಿಟ್ ಮೊತ್ತವನ್ನು ಪಾವತಿಸಬೇಕಾದ ಒಟ್ಟೂ ತೆರಿಗೆಯ ಮೊತ್ತದಲ್ಲಿ ಹೊಂದಾಣಿಕೆಗೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ತೆರಿಗೆಯ ದರ ಇಳಿಸಿದ ಮುಖ್ಯ ಉದ್ದೇಶ ದೇಶದ ಆರ್ಥಿಕತೆಗೆ ಉತ್ತೇಜನ ನೀಡುವುದರ ಜತೆಗೆ ಸರಕು/ಸೇವೆಗಳ ದರ ಇಳಿಸುವ ಮೂಲಕ ಗ್ರಾಹಕರ ಖರೀದಿ ಸಾಮರ್ಥ್ಯ ಹೆಚ್ಚಿಸುವುದು. ಆದ್ದರಿಂದ ಉದ್ದಿಮೆದಾರರು ಇದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಬೇಕು ಮತ್ತು ಹಾಗೆ ಮಾಡುವಂತೆ ನಿಗಾ ವಹಿಸಲಾಗುವುದೆಂದು ಕೇಂದ್ರ ವಿತ್ತ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ.

ಕಾಂಗ್ರೆಸ್ ಆಡಳಿತದ ಕೆಲವು ರಾಜ್ಯಗಳು ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಒಪ್ಪಿದರೂ ನಂತರ ರಾಜಕೀಯ ಕಾರಣಕ್ಕೆ ಈ ಪರಿಷ್ಕರಣೆಗೆ ಆದಾಯ ನಷ್ಟದ ಕಾರಣ ನೀಡಿ ಒಪ್ಪಿಗೆ ನಿರಾಕರಿಸಿವೆ. ಇದರ ಪರಿಣಾಮವನ್ನು ಕೇಂದ್ರ ಸರಕಾರ ಹೇಗೆ ನಿಭಾಯಿಸುತ್ತದೆಂದು ನೋಡಬೇಕು.

ಒಟ್ಟಾರೆಯಾಗಿ ಗಬ್ಬರ್ ಸಿಂಗ್ ಟ್ಯಾಕ್ಸ್ ಎಂದು ಹೀಗಳೆಯಲ್ಪಟ್ಟ ಜಿಎಸ್‌ಟಿ, ಒಟ್ಟಾರೆ ತೆರಿಗೆ ಆದಾಯದಲ್ಲಿ ಐತಿಹಾಸಿಕ ಗರಿಷ್ಠ ಮಟ್ಟವನ್ನು ದಾಖಲಿಸುವ ಜತೆಗೆ ದೇಶದ ಆರ್ಥಿಕತೆಯ ಅಭೂತಪೂರ್ವ ಅಭಿವೃದ್ಧಿಗೂ ಕಾರಣವಾಗಿದೆ. ಇದೀಗ ದೊಡ್ಡ ಪ್ರಮಾಣದ ಇಳಿಕೆದರವನ್ನೂ ಘೋಷಿಸಲಾಗಿರುವುದರಿಂದ ಜಿಎಸ್‌ಟಿಯನ್ನು ವಿರೋಧಿಸಲು ಯಾವ ಸೂಕ್ತ ಕಾರಣವೂ ಸಿಗುತ್ತಿಲ್ಲ.

ಸತ್ವಯುತ ಆರ್ಥಿಕತೆ ಹೊಂದುವ ಮೂಲಕ ಭಾರತ ವಿಶ್ವದ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವಲ್ಲಿ ಜಿಎಸ್‌ಟಿ-2 ಸಹಾಯಕವಾಗುವುದರಲ್ಲಿ ಸಂಶಯವಿಲ್ಲ.

– ತಿಮ್ಮಣ್ಣ ಭಾಗ್ವತ್




### ಜಿಎಸ್‌ಟಿಯ ಲಾಭಗಳು

- ಶೇ.5, ಶೇ.12, ಶೇ.18 ಮತ್ತು ಶೇ.28ರ ನಾಲ್ಕು ಹಂತದ ದರಗಳ ಬದಲಾಗಿ ಶೇ.5 ಮತ್ತು 18ರ ಎರಡು ಹಂತದ ಕಡಿಮೆದರದ ತೆರಿಗೆ ಸುಮಾರು 98 ಪ್ರತಿಶತ ಉತ್ಪನ್ನ ಮತ್ತು ಸೇವೆಗಳಿಗೆ ಅನ್ವಯವಾಗುವುದರಿಂದ ಅವುಗಳ ಉತ್ಪಾದನಾ ಮತ್ತು ಪೂರೈಕೆ ವೆಚ್ಚ ಕಡಿಮೆಯಾಗುತ್ತದೆ.
- ತಂಬಾಕು, ಮದ್ಯ, ಕೋಕಾ ಕೋಲಾದಂಥ ಪೇಯಗಳು, ಹೆಚ್ಚಿನ ದರದ ಕಾರುಗಳಂಥ ಪಾಪದ ಸರಕುಗಳಿಗೆ ಶೇ.40ರ ದರ ಅನ್ವಯಿಸುತ್ತದೆ.
- ಹಾಲು, ಹಣ್ಣು, ತರಕಾರಿ, ಆರೋಗ್ಯವಿಮೆ, ಜೀವವಿಮೆಯಂಥ ಅನೇಕ ಜೀವನಾವಶ್ಯಕ ಸರಕು/ಸೇವೆಗಳಿಗೆ ಶೂನ್ಯ ತೆರಿಗೆ.
- ಪ್ಯಾಕ್ ಮಾಡಿದ ಆಹಾರ, ಔಷಧ, ಚಪ್ಪಲಿ, ಗೃಹಬಳಕೆಯ ವಸ್ತುಗಳು, ಇತರ ಸಾಮಾನ್ಯ ಬಳಕೆಯ ವಸ್ತುಗಳಿಗೆ ಶೇ.5, ಹೋಟೆಲ್ ಸೇವೆಗಳು, ದೂರಸಂಪರ್ಕ ಸೇವೆಗಳು, ಹಣಕಾಸು ಸೇವೆಗಳು, ಟಿ.ವಿ., ವಾಶಿಂಗ್-ಮಷಿನ್, ಲ್ಯಾಪ್‌ಟಾಪ್, 350 ಸಿ.ಸಿ.ಗಿಂತ ಕಡಿಮೆ ಸಾಮರ್ಥ್ಯದ ಮೋಟರ್ ಸೈಕಲ್, 1200 ಸಿ.ಸಿ.ಗಿಂತ ಕಡಿಮೆ ಸಾಮರ್ಥ್ಯದ ಕಾರುಗಳು ಮುಂತಾದವುಗಳಿಗೆ ಶೇ.18. ಶೇ.28ರ ದರದಲ್ಲಿದ್ದ ಬಹುತೇಕ ಸರಕುಗಳನ್ನು 18 ಅಥವಾ 5ಕ್ಕೆ ತರಲಾಗಿದ್ದು, 12ರ ದರದಲ್ಲಿದ್ದ ಎಲ್ಲಾ ಸರಕುಗಳು 5 ಅಥವಾ ಶೂನ್ಯದರಕ್ಕೆ ಬಂದಿವೆ.

# ಭಾವ ಲಹರಿ

## ಗಡಿಯಂಚಿನಿಂದ ಮುಂಚೂಣಿಗೆ ಬಂದ ಈಶಾನ್ಯ ಭಾರತ

ಮಿಜೋರಾಂ ರಾಜ್ಯವು ದಶಕಗಳಿಂದ ಸಂಪರ್ಕದ ಮುಖ್ಯವಾಹಿನಿಯಿಂದ ದೂರವಿತ್ತು. ರೈಲ್ವೆಗಳು ಅದರ ರಾಜಧಾನಿಯನ್ನು ತಲುಪಿರಲಿಲ್ಲ. ಇನ್ನು ಮುಂದೆ ಹಾಗಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಭಾನುವಾರದಂದು ಬೈರಾಬಿ-ಸೈರಾಂಗ್ ರೈಲುಮಾರ್ಗವನ್ನು ಉದ್ಘಾಟಿಸಲಿದ್ದಾರೆ.

ಈಶಾನ್ಯ ಭಾರತವನ್ನು ಹಲವು ದಶಕಗಳಿಂದ, ಅಭಿವೃದ್ಧಿಗಾಗಿ ಕಾಯುತ್ತಿರುವ ದೂರದ ಗಡಿ ಎಂದು ಪರಿಗಣಿಸಲಾಗಿತ್ತು. ಈಶಾನ್ಯ ರಾಜ್ಯಗಳಲ್ಲಿ ವಾಸಿಸುವ ನಮ್ಮ ಸಹೋದರ-ಸಹೋದರಿಯರು ಪ್ರಗತಿಯ ಆಕಾಂಕ್ಷೆಗಳನ್ನು ಹೊಂದಿದ್ದರು. ಆದರೆ ಅವರಿಗೆ ಅರ್ಹವಾದ, ಅಗತ್ಯವಾದ ಮೂಲಸೌಕರ್ಯ ಮತ್ತು ಅವಕಾಶಗಳು ದೊರೆಯುವುದು ಸಾಧ್ಯವಾಗಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ನೀತಿಯನ್ನು ಪ್ರಾರಂಭಿಸಿದಾಗ ಇದೆಲ್ಲವೂ ಬದಲಾಯಿತು. ದೂರದ ಗಡಿಯಲ್ಲಿದೆ ಎಂದು ಪರಿಭಾವಿಸಲಾಗಿದ್ದ ಈಶಾನ್ಯವು ಈಗ ಮುಂಚೂಣಿಯಲ್ಲಿದೆ ಎಂದು ಗುರುತಿಸಲ್ಪಟ್ಟಿದೆ.

ಶಾಂತಿ, ಪ್ರಗತಿ ಮತ್ತು ಸಮೃದ್ಧಿ: ರೈಲ್ವೆ, ರಸ್ತೆಗಳು, ವಿಮಾನ ನಿಲ್ದಾಣಗಳು ಮತ್ತು ಡಿಜಿಟಲ್ ಸಂಪರ್ಕದಲ್ಲಿ ದಾಖಲೆಯ ಹೂಡಿಕೆಗಳ ಮೂಲಕ ಈ ಪರಿವರ್ತನೆ ಸಾಧ್ಯವಾಗಿದೆ.

ಶಾಂತಿ ಒಪ್ಪಂದಗಳು ಸ್ಥಿರತೆಯನ್ನು ತರುತ್ತಿವೆ. ಜನರು ಸರಕಾರಿ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಸ್ವಾತಂತ್ರ್ಯದ ನಂತರ ಇದೇ ಮೊದಲ ಬಾರಿಗೆ, ಈಶಾನ್ಯ ಪ್ರದೇಶವನ್ನು ಭಾರತದ ಅಭಿವೃದ್ಧಿ ಕಥನದ ಕೇಂದ್ರಬಿಂದುವಾಗಿ ನೋಡಲಾಗುತ್ತಿದೆ. ಉದಾಹರಣೆಗೆ ರೈಲ್ವೆಯಲ್ಲಿನ ಹೂಡಿಕೆಗಳನ್ನು ಪರಿಗಣಿಸಿ. 2009-14ರ ಕಾಲಘಟ್ಟಕ್ಕೆ ಹೋಲಿಸಿದರೆ ಈ ಪ್ರದೇಶಕ್ಕೆ ರೈಲ್ವೆ ಬಜೆಟ್ ಹಂಚಿಕೆ ಐದು ಪಟ್ಟು ಹೆಚ್ಚಾಗಿದೆ. ಈ ಹಣಕಾಸು ವರ್ಷವೊಂದರ 10440 ಕೋಟಿ ರು. ಹಂಚಿಕೆ ಮಾಡಲಾಗಿದೆ. 2014ರಿಂದ 2025ರವರೆಗಿನ ಒಟ್ಟು ಬಜೆಟ್ ಹಂಚಿಕೆಯು 62,477 ಕೋಟಿ ರು. ನಷ್ಟಿತ್ತು. ಇಂದು, 77000 ಕೋಟಿ ರು. ಮೌಲ್ಯದ ರೈಲ್ವೆ ಯೋಜನೆಗಳು ಪ್ರಗತಿಯಲ್ಲಿವೆ. ಈ ಹಿಂದೆಂದೂ ಈಶಾನ್ಯ ಪ್ರದೇಶವು ಇಷ್ಟು ದಾಖಲೆಯ ಹೂಡಿಕೆಯನ್ನು ಕಂಡಿರಲಿಲ್ಲ.

ಮಿಜೋರಾಂ ಮೊದಲು: ಈ ಬೆಳವಣಿಗೆಯ ಕಥನದ ಭಾಗವಾಗಿದೆ ಮಿಜೋರಾಂ. ಈ ರಾಜ್ಯವು ತನ್ನ ಶ್ರೀಮಂತ ಸಂಸ್ಕೃತಿ, ಕ್ರೀಡೆಗಳ ಮೇಲಿನ ಪ್ರೀತಿ ಮತ್ತು ಸುಂದರವಾದ ಬೆಟ್ಟಗಳಿಗೆ ಹೆಸರುವಾಸಿಯಾಗಿದೆ. ಆದರೂ, ದಶಕಗಳಿಂದ ಇದು ಸಂಪರ್ಕದ ಮುಖ್ಯವಾಹಿನಿಯಿಂದ ದೂರವಿತ್ತು. ರಸ್ತೆ ಮತ್ತು ವಾಯು ಸಂಪರ್ಕ ಸೀಮಿತವಾಗಿತ್ತು. ರೈಲ್ವೆಗಳು ಅದರ ರಾಜಧಾನಿಯನ್ನು ತಲುಪಿರಲಿಲ್ಲ. ಆಕಾಂಕ್ಷೆಗಳು ಜೀವಂತವಾಗಿದ್ದವು, ಆದರೆ ಬೆಳವಣಿಗೆಯ ಅಪಧಮನಿಗಳು ಕಾಣೆಯಾಗಿದ್ದವು. ಇನ್ನು ಮುಂದೆ ಹಾಗಲ್ಲ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭಾನುವಾರದಂದು ಬೈರಾಬಿ-ಸೈರಾಂಗ್ ರೈಲುಮಾರ್ಗದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಇದು ಮಿಜೋರಾಂ ಪಾಲಿಗೆ ಒಂದು ಐತಿಹಾಸಿಕ ಮೈಲಿಗಲ್ಲು. 8000 ಕೋಟಿ ರುಪಾಯಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಿಸಲಾದ 51 ಕಿಲೋಮೀಟರ್ ಉದ್ದದ ಈ ಯೋಜನೆಯು ಐಜ್ವಾಲ್ ಅನ್ನು ಮೊದಲ ಬಾರಿಗೆ ರಾಷ್ಟ್ರೀಯ ರೈಲ್ವೆ ಜಾಲಕ್ಕೆ ಸಂಪರ್ಕಿಸುತ್ತದೆ.


ಇದರೊಂದಿಗೆ, ಪ್ರಧಾನಮಂತ್ರಿಯವರು ಸಾಯಿರಂಗದಿಂದ ದಿಲ್ಲಿ (ರಾಜಧಾನಿ ಎಕ್ಸ್ ಪ್ರೆಸ್), ಕೋಲ್ಕತ್ತಾ (ಮಿಜೋರಾಮ್ ಎಕ್ಸ್ ಪ್ರೆಸ್) ಮತ್ತು ಗುವಾಹಟಿ (ಐಜ್ವಾಲ್ ಇಂಟರ್‌ಸಿಟಿ) ಗಳಿಗೆ ಮೂರು ಹೊಸ ರೈಲು ಸೇವೆಗಳಿಗೆ ಚಾಲನೆ ನೀಡಲಿದ್ದಾರೆ. ಈ ರೈಲು ಮಾರ್ಗವು ದುರ್ಗಮ ಭೂಪ್ರದೇಶದ ಮೂಲಕ ಹಾದುಹೋಗುತ್ತದೆ.

ಮಿಜೋರಾಂ ಅನ್ನು ಸಂಪರ್ಕಿಸಲು ರೈಲ್ವೆ ಎಂಜಿನಿಯರ್‌ಗಳು 143 ಸೇತುವೆಗಳು ಮತ್ತು 45 ಸುರಂಗಗಳನ್ನು ನಿರ್ಮಿಸಿದ್ದಾರೆ. ಒಂದು ಸೇತುವೆಯಂತೂ ಕುತುಬ್ ಮಿನಾರ್‌ಗಿಂತ ಎತ್ತರವಾಗಿದೆ. ವಾಸ್ತವವಾಗಿ ಈ ಭೂಪ್ರದೇಶದಲ್ಲಿ, ಹಿಮಾಲಯದ ಇತರ ಎಲ್ಲಾ ಮಾರ್ಗಗಳಂತೆ, ರೈಲ್ವೆ ಮಾರ್ಗವನ್ನು ಸೇತುವೆಯ ನಂತರ ಸುರಂಗ ಮತ್ತೆ ಸೇತುವೆ ಹಾಗೂ ಸುರಂಗ ನಿರ್ಮಾಣದ ಮೂಲಕ ಅಸ್ತಿತ್ವಕ್ಕೆ ತರಲಾಗಿದೆ.

ಹಿಮಾಲಯ ಸುರಂಗಮಾರ್ಗ ವಿಧಾನ: ಈಶಾನ್ಯ ಹಿಮಾಲಯವು ನವಿರಾದ ಪರ್ವತ ಪ್ರದೇಶವನ್ನು ಹೊಂದಿದ್ದು, ಮೃದುವಾದ ಮಣ್ಣು ಮತ್ತು ಸಾವಯವ ವಸ್ತುಗಳನ್ನು ಒಳಗೊಂಡಿರುವ ದೊಡ್ಡ ವಿಭಾಗಗಳನ್ನು ಹೊಂದಿದೆ. ಈ ಪರಿಸ್ಥಿತಿಗಳಲ್ಲಿ ಸುರಂಗಗಳನ್ನು ಮತ್ತು ಸೇತುವೆಗಳನ್ನು ನಿರ್ಮಿಸುವುದು ಅಸಾಧಾರಣ ಸವಾಲಿನ ಕೆಲಸ. ಸಡಿಲವಾದ ಮಣ್ಣು, ನಿರ್ಮಾಣದ ಸವಾಲುಗಳನ್ನು ಬೆಂಬಲಿಸಲು ಸಾಧ್ಯವಾಗದ ಕಾರಣ ಇಲ್ಲಿ ಸಾಂಪ್ರದಾಯಿಕ ವಿಧಾನಗಳು ವಿಫಲಗೊಳ್ಳುತ್ತವೆ.

ಇದನ್ನು ನಿವಾರಿಸಲು, ನಮ್ಮ ಎಂಜಿನಿಯರ್‌ಗಳು ಹೊಸ ಮತ್ತು ಚತುರ ವಿಧಾನವನ್ನು ಬಳಸಿ ಕೊಂಡರು. ಈಗ ಇದನ್ನು ಹಿಮಾಲಯನ್ ಸುರಂಗಮಾರ್ಗ ವಿಧಾನ ಎಂದು ಕರೆಯಲಾಗುತ್ತದೆ. ಈ ತಂತ್ರದಲ್ಲಿ, ಸುರಂಗ ಮಾರ್ಗ ಮತ್ತು ನಿರ್ಮಾಣವನ್ನು ಕೈಗೊಳ್ಳಲು ಮಣ್ಣನ್ನು ಮೊದಲು ಸ್ಥಿರಗೊಳಿಸಲಾಗುತ್ತದೆ ಮತ್ತು ನಂತರ ಅದನ್ನು ಗಟ್ಟಿಗೊಳಿಸಲಾಗುತ್ತದೆ. ಈ ಪ್ರದೇಶದ ಅತ್ಯಂತ ಕಷ್ಟಕರವಾದ ಯೋಜನೆಗಳಲ್ಲಿ ಒಂದನ್ನು ಪೂರ್ಣಗೊಳಿಸಲು ಇದು ನಮಗೆ ಅನುವು ಮಾಡಿ ಕೊಟ್ಟಿತು.

ಭೂಕಂಪನ ಚಟುವಟಿಕೆಗಳ ಸಂಭಾವ್ಯತೆ ಇರುವ ಈ ಪ್ರದೇಶದಲ್ಲಿ ಹೆಚ್ಚಿನ ಎತ್ತರದಲ್ಲಿ ನಿರ್ಮಾಣವಾಗುವ ಸೇತುವೆಗಳ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತೊಂದು ಪ್ರಮುಖ ಸವಾಲಾಗಿತ್ತು. ಇಲ್ಲಿಯೂ, ಸೇತುವೆಗಳನ್ನು ಸ್ಥಿತಿಸ್ಥಾಪಕತ್ವ ಶಕ್ತಿಯ ಜತೆಗೆ ಸುರಕ್ಷಿತವಾಗಿಸಲು ವಿಶೇಷ ವಿನ್ಯಾಸಗಳನ್ನು ಮತ್ತು ಸುಧಾರಿತ ತಂತ್ರಗಳನ್ನು ಬಳಸಲಾಯಿತು. ಹೀಗೆ ಸ್ವದೇಶಿ ತಂತ್ರನ ಅಭಿವೃದ್ಧಿಯ ಮೂಲಕ ಗಳಿಸಿದ ನಾವೀನ್ಯವು, ಪ್ರಪಂಚದಾದ್ಯಂತದ ಈ ರೀತಿಯ ಭೂಪ್ರದೇಶಗಳಿಗೆ ಒಂದು ಮಾದರಿಯಾಗಿದೆ. ಇದನ್ನು ಸಾಧ್ಯವಾಗಿಸಲು ಸಾವಿರಾರು ಎಂಜಿನಿಯರ್‌ಗಳು, ಕಾರ್ಮಿಕರು ಮತ್ತು ಸ್ಥಳೀಯ ಸಮುದಾಯಗಳು ಒಟ್ಟಾಗಿ ಕೈಜೋಡಿಸಿವೆ. ಭಾರತವು ನಿರ್ಮಾಣಕ್ಕೆ ಮುಂದಾದಾಗ, ಸ್ಮಾರ್ಟ್ ಆಗಿ ನಿರ್ಮಿಸುತ್ತದೆ!



ಪ್ರದೇಶಕ್ಕೆ ಪ್ರಯೋಜನಗಳು: ರೈಲ್ವೆಯನ್ನು ಬೆಳವಣಿಗೆಯ ಎಂಜಿನ್ ಎಂದು ಪರಿಗಣಿಸಲಾಗುತ್ತದೆ. ಇದು ಹೊಸ ಮಾರುಕಟ್ಟೆಗಳನ್ನು ಹತ್ತಿರಕ್ಕೆ ತರುತ್ತದೆ ಮತ್ತು ವ್ಯಾಪಾರದ ಅವಕಾಶಗಳನ್ನು ಸೃಷ್ಟಿಸುತ್ತದೆ. ಮಿಜೋರಾಂ ಜನರ ಪಾಲಿಗೆ ಹೊಸ ರೈಲು ಮಾರ್ಗವು ಜೀವನ ಪರಿಸ್ಥಿತಿಗಳನ್ನು ಸುಧಾರಿಸುತ್ತದೆ. ಮಿಜೋರಾಂನಲ್ಲಿ ರಾಜಧಾನಿ ಎಕ್ಸ್‌ಪ್ರೆಸ್ ಆರಂಭದೊಂದಿಗೆ, ಐಜ್ವಾಲ್ ಮತ್ತು ದಿಲ್ಲಿ ಪ್ರದೇಶದ ನಡುವಿನ ಪ್ರಯಾಣದ ಸಮಯ 8 ಗಂಟೆಗಳಷ್ಟು ಕಡಿಮೆಯಾಗುತ್ತದೆ.

ಹೊಸ ಎಕ್ಸ್‌ಪ್ರೆಸ್ ರೈಲುಗಳು ಐಜ್ವಾಲ, ಕೋಲ್ಕತ್ತಾ ಮತ್ತು ಗುವಾಹಟಿ ನಡುವಿನ ಪ್ರಯಾಣವನ್ನು ಕ್ಷಿಪ್ರವಾಗಿಸುತ್ತವೆ ಮತ್ತು ಸುಲಭವಾಗಿಸುತ್ತವೆ. ರೈತರು, ವಿಶೇಷವಾಗಿ ಬಿದಿರು ಕೃಷಿ ಮತ್ತು ತೋಟಗಾರಿಕೆಯಲ್ಲಿ ತೊಡಗಿರುವ ರೈತರು, ತಮ್ಮ ಉತ್ಪನ್ನಗಳನ್ನು ಕ್ಷಿಪ್ರವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ವಿಶಾಲ ಮಾರುಕಟ್ಟೆಗಳಿಗೆ ಸಾಗಿಸಲು ಸಾಧ್ಯವಾಗುತ್ತದೆ. ಆಹಾರ ಧಾನ್ಯಗಳು ಮತ್ತು ರಸಗೊಬ್ಬರಗಳಂಥ ಅಗತ್ಯ ವಸ್ತುಗಳ ಸಾಗಣೆ ಸುಲಭವಾಗುತ್ತದೆ. ಮಿಜೋರಾಂನ ನೈಸರ್ಗಿಕ ಸೌಂದರ್ಯವು ಹೆಚ್ಚು ಸುಲಭವಾಗಿ ಲಭ್ಯವಾಗುತ್ತಿದ್ದಂತೆ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಗುತ್ತದೆ.



ಇದು ಸ್ಥಳೀಯ ವ್ಯವಹಾರಗಳನ್ನು ಉತ್ತೇಜಿಸುತ್ತದೆ ಮತ್ತು ಯುವಜನರಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ. ಈ ಯೋಜನೆಯು ಜನರಿಗೆ ಶಿಕ್ಷಣ, ಆರೋಗ್ಯ, ರಕ್ಷಣೆ ಮತ್ತು ಉದ್ಯೋಗಕ್ಕೆ ಉತ್ತಮ ಅವಕಾಶಗಳನ್ನು ಕಲ್ಪಿಸಲಿದೆ. ಮಿಜೋರಾಂಗೆ, ಈ ಸಂಪರ್ಕವು ಎಲ್ಲವನ್ನೂ ಮತ್ತು ಅದಕ್ಕಿಂತ ಇನ್ನೂ ಹೆಚ್ಚಿನ ಭರವಸೆಯನ್ನು ನೀಡುತ್ತದೆ. ಹೀಗಾಗಿ, ಐಜ್ವಾಲ್ ಇನ್ನು ಮುಂದೆ ದೂರದ ಪ್ರದೇಶ ಎಂದೆನಿಸುವುದಿಲ್ಲ.

ರಾಷ್ಟ್ರದಾದ್ಯಂತ ಅಭಿವೃದ್ಧಿ: ದೇಶಾದ್ಯಂತ ರೈಲ್ವೆಯು ದಾಖಲೆಯ ಪರಿವರ್ತನೆಯನ್ನು ಕಾಣುತ್ತಿದೆ. ಇತ್ತೀಚೆಗೆ 100ಕ್ಕೂ ಹೆಚ್ಚು ಅಮೃತ ಭಾರತ್ ನಿಲ್ದಾಣಗಳನ್ನು ಉದ್ಘಾಟಿಸಲಾಗಿದ್ದು, ಇನ್ನೂ 1200 ನಿಲ್ದಾಣಗಳು ಅಭಿವೃದ್ಧಿಯ ಹಂತದಲ್ಲಿವೆ. ಈ ನಿಲ್ದಾಣಗಳು ಪ್ರಯಾಣಿಕರಿಗೆ ಆಧುನಿಕ ಸೌಲಭ್ಯಗಳನ್ನೂ, ನಗರಗಳಿಗೆ ಬೆಳವಣಿಗೆಯ ಹೊಸ ಕೇಂದ್ರಗಳನ್ನೂ ಒದಗಿಸುತ್ತವೆ. 150ಕ್ಕೂ ಹೆಚ್ಚು ಹೈಸ್ಪೀಡ್ ವಂದೇ ಭಾರತ್ ರೈಲುಗಳು ಪ್ರಯಾಣಿಕರ ಅನುಕೂಲವನ್ನು ಗಮನದಲ್ಲಿ ಇಟ್ಟುಕೊಂಡು ಹೊಸ ಮಾನದಂಡಗಳನ್ನು ಸ್ಥಾಪಿಸುತ್ತಿವೆ.

ಅದೇ ಸಮಯದಲ್ಲಿ, ರೈಲ್ವೆ ಜಾಲವು ಬಹುತೇಕ ವಿದ್ಯುದೀಕರಣದಿಂದ ಕಂಗೊಳಿಸುತ್ತಿದೆ. 2014 ರಿಂದ ಇದುವರೆಗೆ 35000 ಕಿಲೋಮೀಟರ್‌ನಷ್ಟು ಉದ್ದದ ಹಳಿಗಳನ್ನು ನಿರ್ಮಿಸಿದ್ದು, ಇದು ಹಿಂದಿನ ಆರು ದಶಕಗಳಲ್ಲಿ ಸಾಧಿಸಿದ್ದಕ್ಕಿಂತ ಹೆಚ್ಚಿನದಾಗಿದೆ. ಕಳೆದ ವರ್ಷವೊಂದರ, 3200 ಕಿಲೋ ಮೀಟರ್‌ನಷ್ಟು ಹೊಸ ರೈಲು ಮಾರ್ಗಗಳನ್ನು ಸೇರ್ಪಡೆಗೊಳಿಸಲಾಗಿದೆ.

ಅಭಿವೃದ್ಧಿ ಮತ್ತು ರೂಪಾಂತರದ ಈ ವೇಗವು ಈಶಾನ್ಯ ಭಾರತದಲ್ಲಿಯೂ ಗೋಚರಿಸುತ್ತಿದೆ. ಈಶಾನ್ಯಕ್ಕಾಗಿ ಮುನ್ನೋಟ: ನಮಗೆ, ಪೂರ್ವ ಭಾರತ ಎಂದರೆ- ಸಬಲೀಕರಣ, ಕ್ರಿಯೆ, ಬಲಪಡಿಸುವಿಕೆ ಮತ್ತು ಪರಿವರ್ತನೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ಈ ಮಾತುಗಳು ಈಶಾನ್ಯ ಭಾರತಕ್ಕೆ ಸಂಬಂಧಿಸಿ ಅವರ ಕಾರ್ಯವಿಧಾನದ ಸಾರವನ್ನು ಸೆರೆಹಿಡಿಯುತ್ತವೆ. ಬಹು ರಂಗಗಳಲ್ಲಿನ ನಿರ್ಣಾಯಕ ಕ್ರಮವು ಪ್ರದೇಶದ ಪರಿವರ್ತನೆಯನ್ನು ಖಚಿತಪಡಿಸಿದೆ.

ಅಸ್ಸಾಂನಲ್ಲಿ ಟಾಟಾ ಸಮೂಹದ ಸೆಮಿಕಂಡಕ್ಟರ್ ಸೌಲಭ್ಯ, ಅರುಣಾಚಲ ಪ್ರದೇಶದಲ್ಲಿ ಟಾಟೊ ದಂಥ ಜಲವಿದ್ಯುತ್ ಯೋಜನೆಗಳು ಮತ್ತು ಬೋಗಿಬೀಲ್ ರೈಲು-ರಸ್ತೆ ಸೇತುವೆಯಂಥ ಪ್ರತಿಷ್ಠಿತ ಮೂಲಸೌಕರ್ಯ ಯೋಜನೆಗಳು ಈ ಪ್ರದೇಶವನ್ನು ಮರುರೂಪಿಸುತ್ತಿವೆ. ಇವುಗಳ ಜತೆಗೆ, ಗುವಾ ಹಟಿಯಲ್ಲಿ ಏಮ್ಸ್ ಸ್ಥಾಪನೆ ಮತ್ತು 10 ಹೊಸ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳು ಆರೋಗ್ಯ ರಕ್ಷಣೆ ಮತ್ತು ಸಂಪರ್ಕ ಕ್ಷೇತ್ರಗಳನ್ನು ಬಲಪಡಿಸಿವೆ.

ಗಡಿಯಂಚಿನಿಂದ ಮುಂಚೂಣಿಗೆ: ದಶಕಗಳ ಕಾಲ, ಮಿಜೋರಾಂನ ಜನರಿಗೆ ರಸ್ತೆಗಳು, ಶಾಲೆಗಳು ಮತ್ತು ರೈಲ್ವೆಗಳಿಗಾಗಿ ಕಾಯುವಂತೆ ಹೇಳಲಾಗುತ್ತಿತ್ತು. ಆ ಕಾಯುವಿಕೆ ಈಗ ಮುಗಿದಿದೆ. ಈ ಯೋಜನೆಗಳು ಈಶಾನ್ಯ ಭಾರತದ ಕುರಿತಾದ ನಮ್ಮ ಪ್ರಧಾನಮಂತ್ರಿಯವರ ದೃಷ್ಟಿಕೋನಕ್ಕೆ, ಮುನ್ನೋಟಕ್ಕೆ ಸಾಕ್ಷಿಯಾಗಿವೆ; ಅಂದರೆ ಒಂದು ಕಾಲದಲ್ಲಿ ಗಡಿ ಎಂದು ಪರಿಗಣಿಸಲ್ಪಟ್ಟಿದ್ದ ಪ್ರದೇಶವು ಈಗ ಭಾರತದ ಬೆಳವಣಿಗೆಯ ಮುಂಚೂಣಿಯಲ್ಲಿರುವ ಭಾಗವೆಂದು ಪ್ರಶಂಸಿಸಲ್ಪಡುತ್ತಿದೆ. ಇದು ಹೆಮ್ಮೆಯ ಸಂಗತಿಯಲ್ಲವೇ?

**- ಅಶ್ವಿನಿ** ವೈಷ್ಣವ್

## ಕನ್ನಡ ಕವನಗಳು
★★★★★★

### ಮೂಗನಾಗಿಹ ಸಮಯ



ಯಾರೋ ಇಹರು ಎಂದೂ ಬಂದೆ
ಯಾರೂ ಇರದೆ ನೊಂದೂ ಬೆಂದೆ
ಕನಸೂ ಕನಸೋ ಅರಳೀ ನನಸು
ಕಾಣದಂತೆಯೇ ಬಂತೂ ನಿಂದೆ
ಸೊರಗಿ ಸೋತ ಗಿಡದಿ ಚಿಗುರೇ
ಚಿಗರೆಗೀಗ ಊಟವೂ ಸಿಗದೇ
ಹಸಿವು ಹಸಿವಿನಲ್ಲೇ ಬಸಿರೇ
ಒಣಗಿ ನಿಂತ ಬದುಕಲೇ ಉಸಿರೇ
ಕಣ್ಣ ನೋಟದೊಳಗೆ ಇಹುದೇ
ಚೆಲುವ ಕಾಂತಿ ಮೋಹ ಉಡುಗೆ
ಬಾಳ ಪಥದ ಜೊತೆಗೆ ಯಾರೋ
ಮನದ ಸನಿಹ ಸುಳ್ಳೇ ಬೆಸುಗೆ
ಇರುವ ಮಕ್ಕಳು ದೂರ ಹೋಗೆ
ಹೃದಯದೊಳಗೆ ಹರುಷ ನಡುಗೆ
ವಯಸ್ಸು ಮಾಗಿ ಖುಷಿಯ ಕಳೆಯೆ
ಜೀವ ಚಲಿಸಿತೋ ಸಾವಿನೆಡೆಗೆ

**- ಹಾ. ಮ ಸತೀಶ** ಬೆಂಗಳೂರು

### ಬಿಟ್ಟುಬಿಡಿ ನನ್ನ

ನೂರಾರು ಕನಸುಗಳ ಬಿತ್ತಿ
ಬದುಕುವ ಆಸೆ ಎಮ್ಮರವಾಗಿಸಿ
ನೀವೇನು ಸಾಧಿಸಿದಿರಿ
ಸ್ವಚ್ಛಂದವಾದ ಕನಸಲಿ ಮಿಂದು
ಆಗಸದ ಹಕ್ಕಿಯಾಗಿದ್ದ ನಾನು
ನಿಮಗೆ ಏಕೆ ಬಲಿಯಾಗಲಿ
ಒಬ್ಬಂಟಿಯಾದರೂ ಬದುಕುವೆ
ನಗುವ ಹಂಚಿ ಬಿಟ್ಟುಬಿಡಿ ನನ್ನ..
ಹೊಸ ಹೊಸ ತಂತ್ರಗಳಲ್ಲಿ ಸಿಕ್ಕು
ನಾನೇನೆಂಬುದೇ ಮರೆತಿರುವೆ
ಹಗಲು ಓಟ ಇರುಳೂ ಓಟ
ಪ್ರತಿ ಗಳಿಗೆ ಏಕೆ ಈ ಆಟ
ನನ್ನ ಮನಸ್ಸಿಗೂ ದಿಗ್ಬಂದನ




ನನ್ನ ಮಾತುಗಳಿಗೂ ಈಗ ಮೌನ
ನಾನೇನು ಸಾದಿಸಲು ಹೊರಟಿರುವೆ
ನಾನು ನಾನಾಗಬೇಕಿದೆ ಬಿಟ್ಟುಬಿಡಿ ನನ್ನ..
ಆಗಸದ ಬಣ್ಣಗಳ ಕದಿಯುವಿರಿ
ಹಸಿರು ಹೊದಿಕೆಯ ಮಡಿಚಿದಿರಿ
ಯಾವುದು ಕಸ ಯಾವುದು ಅಮೃತ
ನಿಮ್ಮ ಮಾತುಗಳ ಹೇಗೆ ನಂಬಲಿ
ನೀವಾದರೂ ಸುಕವಾಗಿರುವಿರೆ
ನ್ಯಾಯ ಅನ್ಯಾಯದ ತಿಕ್ಕಾಟ
ಹಿಂಸೆ ಅಹಿಂಸೆಯ ಜೂಜಾಟ
ನಾನು ನಿಜವಾಗುವೆ ಬಿಟ್ಟುಬಿಡಿ ನನ್ನ..
ತಾರಾ ಗಣತಿ ಸಾಗುತ್ತಲೇ ಇದೆ
ತೃಪ್ತಿ ಎಂಬ ಬೆಳಕು ತುಂಬಾ ದೂರ
ಇರುವ ಬಾಗ್ಯ ಗಂಟು ಕಟ್ಟಿ
ನಡೆಯುತ್ತಿರುವುದು ಎಲ್ಲಿಗೆ
ಅಂತರಂಗದ ಬಾಗಿಲು ತೆರೆದಿಲ್ಲ
ಇತಿಹಾಸದ ಅರಿವು ಮೂಡಿಲ್ಲ
ನೀವೆಂದಿಗೂ ನನಗೆ ನಾಯಕರಲ್ಲ
ನಾನು ಆಳಾಗಲಾರೆ ಬಿಟ್ಟುಬಿಡಿ ನನ್ನ..

**- ವೆಂಕಟೇಶ** ಚಾಗಿ

### ಶಿಲ್ಪಿ ಕಲಿತ ಪಾಠ

ಒಂದು ದೊಡ್ಡ ಬೌದ್ಧ ವಿಹಾರ. ಅಲ್ಲಿ ಅನೇಕ ಬೌದ್ಧ ಭಿಕ್ಷುಗಳ ವಾಸ. ಅಲ್ಲಿಗೆ ಒಬ್ಬ ಶಿಲ್ಪಿ ದಿನವೂ ತಾನು ಕೆತ್ತಿದ ಬುದ್ದನ ಶಿಲ್ಪವನ್ನು ಒಬ್ಬ ಭಿಕ್ಷುವಿಗೆ ತೋರಿಸಿ, ಕೊಂಡುಕೊಳ್ಳಲು ಕೇಳಿಕೊಳ್ಳುತ್ತಿದ್ದ. ಭಿಕ್ಷು ದಿನವೂ ಅದರಲ್ಲಿ ಮುಖ್ಯವಾದುದನ್ನು ತುಂಬಿ ತೆಗೆದುಕೊಂಡು ಬರಲು ಹೇಳುತ್ತಿದ್ದನು. ಹೀಗೆ ಕೆಲವು ದಿನಗಳು ಕಳೆದವು, ಕೊನೆಗೆ ಒಂದು ದಿನ ಶಿಲ್ಪಿ ಅದೇನು ಮುಖ್ಯವಾದದ್ದು ತುಂಬಬೇಕು? ಎಂದ.

ಜೀವದ ಜೀವಾಳ ಎಂದ ಬೌದ್ಧ ಭಿಕ್ಷು.



ನಾನು ಬ್ರಹ್ಮನಲ್ಲ ಶಿಲ್ಪದಲ್ಲಿ ಜೀವ ತುಂಬಲು ಎಂದ ಶಿಲ್ಪಿ.

ಜೀವದ ಜೀವಾಳ ಬುದ್ದನ ಮುಗುಳು ನಗೆ, ಅದು ಬ್ರಹ್ಮನ ಕೆಲಸವಲ್ಲ, ಶಿಲ್ಪಿಯ ಕೆಲಸ, ಅಂದಾಗ ಭಿಕ್ಷುವಿನ ಮಾತು ಶಿಲ್ಪಿಗೆ ಮನದಟ್ಟಾಯಿತು.

ತನ್ನ ಕೌಶಲಕ್ಕೆ ಗುಟ್ಟು ಏನು ಎಂದು ತಿಳಿದು ಕೊಂಡ.

## ಹಾಗೇ ಸುಮ್ಮನೆ ದಸರಾ ಉದ್ಘಾಟಿಸುವ ಕನಸು ಬಿದ್ದಾಗ...

ಒಂದು ವೇಳೆ ಶ್ರೀಮತಿ ಭಾನು ಮುಷ್ತಾಕ್ ಅವರು ಮೈಸೂರು ದಸರಾ ಉದ್ಘಾಟಿಸಿದರೆ ಏನಾಗಬಹುದು ಅಥವಾ ಅವರು ಉದ್ಘಾಟಿಸದಿದ್ದರೆ ಏನಾಗಬಹುದು? ತುಂಬಾ ತುಂಬಾ ತಲೆಕೆಡಿಸಿಕೊಂಡು ವಾದ ವಿವಾದ ಮಾಡುತ್ತಿರುವವರಿಗಾಗಿ.... ಉದ್ಘಾಟಿಸಿದರೆ ವೈಯಕ್ತಿಕ ಮಟ್ಟದಲ್ಲಿ ಭಾನು ಮುಷ್ತಾಕ್ ಅವರಿಗೆ ಪ್ರಖ್ಯಾತಿಯ ಸಂತೋಷ ಮತ್ತು ಬದುಕಿನ ಸಾರ್ಥಕತೆಯ ಭಾವ ಉಂಟಾಗಬಹುದು. ಹಾಗೆಯೇ ರಾಜಕೀಯ ಪಕ್ಷಗಳಿಗೆ ಒಂದಷ್ಟು ಜನಾಭಿಪ್ರಾಯದ ಲಾಭ - ನಷ್ಟ ಆಗಬಹುದು. ಅದನ್ನು ಹೊರತುಪಡಿಸಿ ಯಾವುದೇ ರೀತಿಯ ಸಾಮಾನ್ಯ ವ್ಯಕ್ತಿಯ ಬದುಕಿನಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಏಕೆಂದರೆ ಭಾನು ಮುಷ್ತಾಕ್ ಎನ್ನುವ ಮಹಿಳೆ ನಿಸರ್ಗದ ಒಂದು ಜೀವಿ. ನಿಸರ್ಗಕ್ಕೆ ಆಕೆ ಹಿಂದು, ಮುಸ್ಲಿಮ, ಹೆಣ್ಣು, ಗಂಡು ಎಂಬ ಯಾವ ಅರಿವೂ ಇರುವುದಿಲ್ಲ.


ಉದ್ಘಾಟನೆಯ ವಿಧಾನ ಮತ್ತು ಅದಕ್ಕೆ ಬಳಸಬಹುದಾದ ಹೂವು, ಹಣ್ಣು, ಅರಿಶಿನ, ಕುಂಕುಮ, ಪೂಜೆ, ಮಂತ್ರ, ಅಜಾನ್, ಖುರಾನ್ ಪಠಣ, ಪ್ರಾರ್ಥನೆ ಎಲ್ಲವೂ ನಿರ್ಜೀವ. ಅವುಗಳಿಗೆ ಏನು ನಡೆಯುತ್ತಿದೆ ಎಂಬುದರ ಅರಿವೇ ಇರುವುದಿಲ್ಲ. ಕ್ರಿಶ್ಚಿಯನ್ ಪ್ರಾರ್ಥನೆ ಮಾಡಿದರೂ, ಹಿಂದೂ ಭಜನೆ ಮಾಡಿದರೂ, ಇಸ್ಲಾಂ ತತ್ವ ಹೇಳಿದರೂ, ಬೌದ್ಧ, ಸಿಖ್, ಜೈನ, ಪಾರ್ಸಿ, ಲಿಂಗಾಯಿತ ವಚನ ಯಾವುದೇ ಹೇಳಿದರು ಅದಕ್ಕೆ ತಿಳಿಯುವುದೇ ಇಲ್ಲ.

ಆದರೆ ಮನುಷ್ಯರೆಂಬ ನಾವುಗಳು ಮಾತ್ರ ಇದೊಂದು ಭಯಂಕರ ವಿದ್ಯಮಾನ ಎನ್ನುವಂತೆ ತುಂಬಾ ತುಂಬಾ ಚರ್ಚೆ ಮಾಡುತ್ತಿದ್ದೇವೆ. ಟೋಪಿ, ಗಡ್ಡ, ಕುಂಕುಮ, ನಾಮ, ಕ್ರಾಸು, ಪ್ರಾರ್ಥನೆ ಇತ್ಯಾದಿ ಇತ್ಯಾದಿಗಳನ್ನು ನಾವೇ ನಿರ್ಮಿಸಿಕೊಂಡು ನಾವು ಪ್ರಕೃತಿಯ ಶಿಶುಗಳು ಎನ್ನುವ ಮೂಲ ವಿಷಯವನ್ನೇ ಮರೆತು ಉಳಿದ ಎಲ್ಲ ಭಿನ್ನತೆಯನ್ನು ಚರ್ಚಿಸುತಿದ್ದೇವೆ. ಅಲ್ಲಿನ ಆನೆ, ಕುದುರೆಗಳಿಗೂ ಸಹ ರಾಜ ಯಾರು, ರಾಣಿ ಯಾರು, ಮುಖ್ಯಮಂತ್ರಿ ಯಾರು, ಭಾನು ಮುಷ್ತಾಕ್ ಯಾರು, ಸಿದ್ದರಾಮಯ್ಯ ಯಾರು, ಜಿಲ್ಲಾ ಉಸ್ತುವಾರಿ ಸಚಿವ ಯಾರು ಮುಂತಾದ ಏನೊಂದೂ ತಿಳಿದಿಲ್ಲ. ನಾವು ಮಾತ್ರ ಎಲ್ಲವೂ ತಿಳಿದಂತೆ ಏನೇನೋ ಮಾತನಾಡುತ್ತೇವೆ. ವಾಸ್ತವವಾಗಿ ಆನೆ, ಕುದುರೆಗಳಂತೆ ನಾವು ಸಹ ಜೀವವಿರುವ ಪ್ರಾಣಿಗಳು ಮಾತ್ರ.

ಮನುಷ್ಯ ಎಂಬ ನಾಗರಿಕ ಪ್ರಾಣಿಗೆ ಅಕ್ಷರ ಜ್ಞಾನವೇ ಶಾಪವಾಗುತ್ತಿರುವಂತಿದೆ. ಈ ವಿದ್ಯೆಯಿಂದ ಆತನ ಅರಿವಿನ ಗುಣಮಟ್ಟ ಯಾವ ದಿಕ್ಕಿನತ್ತ ಸಾಗುತ್ತಿದೆಯೋ ಅರ್ಥವಾಗುತ್ತಿಲ್ಲ. ತೀರ ಸಂಕುಚಿತವಾಗಿ, ವಿಭಜಕ ಮನಸ್ಥಿತಿಯಲ್ಲಿ ಯೋಚಿಸುವಂತಾಗಿದ್ದಾನೆ. ಒಂದು ಮನುಷ್ಯ ಪ್ರಾಣಿಯನ್ನು ಗಂಡು-ಹೆಣ್ಣು ಎಂತಲೋ, ಹಿಂದೂ-ಮುಸ್ಲಿಂ ಎಂತಲೋ, ಶ್ರೀಮಂತ ಬಡವ ಎಂತಲೋ ತಾನೇ ವಿಭಜಿಸಿಕೊಂಡು ಈಗ ಆ ವಿಷ ಚಕ್ರದಲ್ಲಿ ತಾನೇ ಸಿಲುಕಿ ಹುಚ್ಚುಚ್ಚಾಗಿ ಮಾತನಾಡುತ್ತಾನೆ.

ಕೆಲವು ಮಹಾನ್ ಬುದ್ಧಿವಂತರೆಂದುಕೊಂಡಿರುವವರು ಅದರ ಬಗ್ಗೆ ಚರ್ಚಿಸುತ್ತಾರೆ. ಇದು ಸರಿಯೇ, ಇದು ತಪ್ಪೇ, ಉದ್ಘಾಟನೆ ಮಾಡಿದರೆ ಹೇಗೆ, ಮಾಡದಿದ್ದರೆ ಹೇಗೆ, ಏಕೆ ಮಾಡಬೇಕು, ಯಾರು ಮಾಡಬೇಕು. ವಾಸ್ತವವಾಗಿ ಅದೊಂದು ಉತ್ಸವ. ಉದ್ಘಾಟನೆಯ ಅವಶ್ಯಕತೆಯೇ ಇಲ್ಲ. ಸರ್ಕಾರದ ಒಂದು ಕಾರ್ಯಕ್ರಮ. ಯಾರೋ ಒಬ್ಬರಿಗೆ ಒಂದು ಅವಕಾಶ ಕಲ್ಪಿಸುವ ದೃಷ್ಟಿಯಿಂದ ಮುಖ್ಯ ಅತಿಥಿಯನ್ನು ಕರೆಯುತ್ತಾರೆ. ಒಂದು ಅರ್ಧ ಮುಕ್ಕಾಲು ಗಂಟೆಯಲ್ಲಿ ಕಾರ್ಯಕ್ರಮ ಮುಗಿಯುತ್ತದೆ. ಅದರಿಂದ ಯಾವ ಬದಲಾವಣೆಯೂ ಆಗುವುದಿಲ್ಲ. ಇದಕ್ಕಾಗಿ ಇಷ್ಟೆಲ್ಲ ಗೊಂದಲಗಳು. ಬಹುಶಃ ಮನುಷ್ಯನಿಗೆ ನೆಮ್ಮದಿಯೇ ಬೇಡವೆನಿಸುತ್ತಿದೆ. ದಿನವೂ ಏನಾದರೂ ಒಂದು ಈ ರೀತಿಯ ವಿಚಿತ್ರಗಳನ್ನು ತನ್ನ ಮನಸ್ಸಿನೊಳಗಿನ ಮೆದುಳಿಗೆ ಹಾಕಿಕೊಂಡು ಚಡಪಡಿಸುತ್ತಾ ಕೊರಗುತ್ತಲೇ ಇರಬೇಕೆಂಬ ಶಾಪ ಇರಬೇಕೇನೋ. ಇದನ್ನೆಲ್ಲಾ ಮರೆತು ಒಮ್ಮೆ ಈ ದೃಷ್ಟಿಯಿಂದ ಯೋಚಿಸಿ ನೋಡಿ....

ಬೆಳಗ್ಗೆ ಮಧ್ಯಾಹ್ನ ಸಂಜೆ ಜೋರಾಗಿ ಅಜಾನ್ ಕೂಗಿದ್ದೇ ಕೂಗಿದ್ದು, ಶತಶತಮಾನಗಳಿಂದ, ಆದರೆ, ಈಗಲೂ ಮಸೀದಿಗಳ ಮುಂದೆ ಚಳಿಯಲ್ಲಿ ನಡುಗುತ್ತಾ, ಕೈಯಲ್ಲಿ ತಟ್ಟೆ ಹಿಡಿದ ಭಿಕ್ಷೆ ಬೇಡುವ ನನ್ನಜ್ಜ, ಬಿಸಿಲಲ್ಲಿ ಬೇಯುತ್ತಾ ಬುರ್ಖಾ ತೊಟ್ಟು, ಕಂಕುಳಲ್ಲಿ ಮಗು ಹೊತ್ತು ಭಿಕ್ಷೆಯ ಕಾಸಿಗಾಗಿ ಸೆರಗೊಡ್ಡುವ ನನ್ನವ್ವ, ಮಳೆಯಲ್ಲಿ ನೆನೆಯುತ್ತಾ ಲೋಟ ಹಿಡಿದು ಭಿಕ್ಷೆ ಬೇಡುವ ನನ್ನ ಮಗನಿಗೆ ಹೊಟ್ಟೆ ತುಂಬಾ ಊಟವೇ ಸಿಗಲಿಲ್ಲ. ಯಾಕೋ? ಅದಕ್ಕೆ ಯಾರು ಕಾರಣವೋ? ತುಂಬಿದ ಹೊಟ್ಟೆಯ ಗಣೇಶನನ್ನು ಸಹಸ್ರಾರು ವರ್ಷಗಳಿಂದ ಭಕ್ತಿ ಭಾವನೆಗಳಿಂದ ಅಲಂಕರಿಸಿ ವಿಧವಿಧವಾದ ಹಾಡುಗಳಿಂದ ವರ್ಣಿಸಿ ಅವನನ್ನು ಮೈಕು ಡೋಲು ಡಂಗೂರಗಳಿಂದ ಹೊಗಳಿದರೂ.... ನನ್ನ ರೈತ ಚಿಕ್ಕಪ್ಪ ಹಳ್ಳಿಯಲ್ಲಿ ಯಾರದೋ ಕಷ್ಟಕ್ಕೆ ಜಾಮೀನಾಗಿ ಕೊನೆಗೆ ಮೋಸ ಹೋಗಿ ಜೈಲುಪಾಲಾದದ್ದು ಯಾಕೋ, ತುಂಬಾ ಪ್ರೀತಿಯಿಂದ ಸಾಕಿದ ನನ್ನ ಅಕ್ಕ ಮದುವೆಯಾದ ಒಂದೇ ವರ್ಷದಲ್ಲಿ ಹೊಟ್ಟೆಯಲ್ಲಿದ್ದ ಮಗುವಿನೊಂದಿಗೆ ಮಹಾ ದೈವಭಕ್ತ ಅತ್ತೆ ಮಾವನವರ ವರದಕ್ಷಿಣೆ ದುರಾಸೆಗೆ ಸುಟ್ಟು ಕರಕಲಾದದ್ದು ಯಾಕೋ? ಅದಕ್ಕೆ ಯಾರು ಕಾರಣವೋ?



ಅನಾದಿ ದಿನಗಳಿಂದಲೂ ಮೌನವಾಗಿ ಮನೆಗಳಲ್ಲಿ, ಚರ್ಚುಗಳಲ್ಲಿ ಯೇಸುಕ್ರಿಸ್ತನ ಶಿಲುಬೆಯ ಮುಂದೆ ನಿಂತು ತದೇಕ ಚಿತ್ತದಿಂದ ಆತನ ಮೂರ್ತಿ ನೋಡಿ ಕೊಂಡು ಪ್ರಾರ್ಥಿಸುತ್ತಿದ್ದರೂ ಆಸ್ಪತ್ರೆಯ ದಾದಿಯಾಗಿ ತನ್ನ ಸೇವೆ ಮಾಡುತ್ತಿದ್ದ ನನ್ನ ತಂಗಿಯ ಮೇಲೆ ಕಾಮುಕರು ಸಾಮೂಹಿಕ ಅತ್ಯಾಚಾರ ಮಾಡಿ ಕೊಂದು ಹಾಕಿದಾಗ, ಚರ್ಚಿನ ಮುಂಭಾಗದಲ್ಲೇ ಇನ್ನೂ ಸಾವಿರಾರು ನಿಸ್ಸಹಾಯಕ ನನ್ನ ರಕ್ತ ಸಂಬಂಧಿಗಳು ತುತ್ತು ಅನ್ನಕ್ಕಾಗಿ ಹಲಬುತ್ತಾ ಕುಳಿತಿರುವಾಗ ಆ ಪ್ರಾರ್ಥನೆಗಳು ತಲುಪಿದ್ದಾದರೂ ಯಾರಿಗೋ? ಅದಕ್ಕೆ ಯಾರು ಕಾರಣವೋ?

ಈಗಲೂ ಪ್ರತಿನಿತ್ಯ, ಬೈಬಲ್ ಅನ್ನು ಓದುತ್ತೇನೆ, ಖುರಾನ್ ಅನ್ನು ಪಠಿಸುತ್ತೇನೆ, ಗೀತೆಯನ್ನು ಜಪಿಸುತ್ತೇನೆ, ಈ ನನ್ನ ಜನಗಳ ಒಳಿತಿಗಾಗಿ.... ಯಾರೂ ಬರಲಿಲ್ಲ, ಏನೂ ಆಗಲಿಲ್ಲ ಯಾಕೋ? ಮಂದಿರ - ಮಸೀದಿ - ಚರ್ಚುಗಳು ಬೇಕೋ? ಪೋಲೀಸು - ಕಾನೂನು - ನ್ಯಾಯಾಂಗ ಬೇಕೋ? ಪೂಜಾರಿ - ಮೌಲ್ವಿ - ಪಾದ್ರಿಗಳು ಬೇಕೋ? ರಾಜಕಾರಣಿಗಳು - ಆಡಳಿತಗಾರರು -ನ್ಯಾಯಾಧೀಶರು ಬೇಕೋ? ಯಾರಿಂದ ಯಾರೋ - ಯಾರಿಗೆ ಯಾರೋ ಅರ್ಥವಾಗುತ್ತಿಲ್ಲ. ಯಾರ ಭಾವನೆಗಳನ್ನೂ ಕೆರಳಿಸುವ ಉದ್ದೇಶ ಇದಲ್ಲ. ನನ್ನ ಅಸಹಾಯಕ, ಅಮಾಯಕ ಜನಗಳ ನೋವಿನ ಭಾವನೆಗಳ ಧ್ವನಿ ಅಷ್ಟೇ. ಇದು ಸ್ಪಷ್ಟವಾದಲ್ಲಿ ನಮ್ಮ ಸಮಸ್ಯೆಗಳು ಕಡಿಮೆಯಾಗಬಹುದು. ನಿಮ್ಮ ನಿಮ್ಮ ದೇವರುಗಳನ್ನು ಹಾಡಿ, ಮುದ್ದಿಸಿ, ಅಲಂಕರಿಸಿ, ಪ್ರಾರ್ಥಿಸಿ ಸಂಭ್ರಮಿಸುವ ಸ್ವಾತಂತ್ರ್ಯ ನಿಮಗಿದ್ದೇ ಇದೆ. ಅದನ್ನು ಕೇಳಲು ಈ ಹುಲುಮಾನವನಾರು?

ಆದರೆ, ಕಣ್ಣ ಮುಂದಿನ, ಈ ಸಮಸ್ಯೆಗಳನ್ನು ಹೋಗಲಾಡಿಸುವ ಸಾಧ್ಯತೆ ಇರುವ ಶಕ್ತಿ, ಜನಗಳು, ಅಧಿಕಾರ ಎಲ್ಲವೂ ಇರುವಾಗ ವಿವೇಚನೆ ಬಳಸಿ ಅದನ್ನು ಉಪಯೋಗಿಸಿಕೊಳ್ಳದೆ, ಇಲ್ಲದ - ಕಾಣದ - ಎಂದೂ ಬಾರದ ಭ್ರಮೆಯೊಂದರ ಸುತ್ತ ಗಮನ ಕೇಂದ್ರೀಕರಿಸಿದರೆ, ಪೆಟ್ರೋಲ್, ಡೀಸೆಲ್, ಡಾಲರ್, ನಿರುದ್ಯೋಗ ಏರಿಕೆಯಾಗುತ್ತಲೇ ಇರುತ್ತದೆ, ಅಪಘಾತಗಳು, ಆತ್ಮಹತ್ಯೆಗಳು, ಅಪರಾಧಿಗಳು, ಅತ್ಯಾಚಾರಗಳು ಸಂಭವಿಸುತ್ತಲೇ ಇರುತ್ತವೆ. ಮಂತ್ರಗಳು, ಭಜನೆಗಳು, ಪ್ರಾರ್ಥನೆಗಳು, ನಡೆಯುತ್ತಲೇ ಇರುತ್ತದೆ, ಹುಚ್ಚರ ಸಂತೆ ನೆನಪಾಗುತ್ತಲೇ ಇರುತ್ತದೆ, ನಾನೇನು ಮಾಡಲಿ.

**- ವಿವೇಕಾನಂದ. ಎಚ್. ಕೆ.**, ಬೆಂಗಳೂರು

## ಮಾವನ ಊರಿನಲ್ಲಿ ರಾವಣನ ದೇಗುಲ!


ರಾಜಸ್ಥಾನದ ಹೆಸರು ಕೇಳಿದ ತಕ್ಷಣ ಮನಸ್ಸಿನಲ್ಲಿ ಮೂಡುವುದು ಭವ್ಯ ಕೋಟೆಗಳು, ಐತಿಹಾಸಿಕ ಅರಮನೆಗಳು ಮತ್ತು ಕಲಾತ್ಮಕ ಕೆತ್ತನೆಗಳ ಚಿತ್ರ. ಆದರೆ ಈ ವೈಭವದ ನಡುವೆ, ಜೋಧಪುರದ ಮಾಂಡೋರ್‌ನಂತಹ ಅಪರೂಪದ ಸ್ಥಳವೊಂದು ಇತಿಹಾಸದ ಕತೆಗಳನ್ನು ತನ್ನ ಕಲ್ಲಿನ ಸ್ಮಾರಕಗಳಲ್ಲಿ ಬಂಧಿಸಿಟ್ಟಿದೆ. ಒಂದು ಕಾಲದಲ್ಲಿ ರಾಜರ ಸ್ಮಶಾನವಾಗಿದ್ದ ಈ ಸ್ಥಳ ಇಂದು ಒಂದು ಸುಂದರ ಉದ್ಯಾನವನವಾಗಿ ಪರಿವರ್ತಿತವಾಗಿದ್ದು, ಪ್ರವಾಸಿಗರಿಗೆ ಆಕರ್ಷಣೆಯ ಕೇಂದ್ರವಾಗಿದೆ.

ಮಾಂಡೋರ್ ಪ್ರದೇಶವು ಜೋಧಪುರದ ಕೋಟೆ ಮತ್ತು ಅರಮನೆಗಳಿಂದ ಕೇವಲ ಕೆಲವೇ ಕಿಲೋಮೀಟರ್ ದೂರದಲ್ಲಿದೆ. ಇದು ಒಂದು ರೀತಿಯ ಗುಪ್ತ ಖಜಾನೆಯಂತೆ, ಇತಿಹಾಸದ ಪುಟಗಳಿಂದ ಹೊರಬಂದ ಅದ್ಭುತ ನಗರದಂತೆ ಭಾಸವಾಗುತ್ತದೆ. ಆರನೇ ಶತಮಾನದಲ್ಲಿ ಮಾರ್ವಾರ್‌ನ ಮೊದಲ ರಾಜಧಾನಿಯಾಗಿದ್ದ ಮಾಂಡೋರ್, ಕಾಲಾಂತರದಲ್ಲಿ ಜೋಧಪುರಕ್ಕೆ ಸ್ಥಳಾಂತರಗೊಂಡರೂ, ಇಲ್ಲಿನ ಕೋಟೆಯ ಅವಶೇಷಗಳು ಮತ್ತು ಸ್ಮಾರಕಗಳು ಇತಿಹಾಸದ ಮೂಕ ಸಾಕ್ಷಿಗಳಾಗಿ ಉಳಿದಿವೆ. ಗುಜಾರ್-ಪ್ರತಿಹಾರರ ಆಳ್ವಿಕೆಯ ಕಾಲದಲ್ಲಿ ಇದು ಪ್ರಮುಖ ಕೇಂದ್ರವಾಗಿತ್ತು. 1389ರಲ್ಲಿ ರಾವ್ ಹೇಮಾ ಗೆಹ್ಲೋಟ್ ಪ್ರತಿಹಾರ ರಾಜಕುಮಾರಿಯನ್ನು ವಿವಾಹವಾದ, ಇತಿಹಾಸದ ಒಂದು ಆಕರ್ಷಕ ಘಟನೆ ಇಲ್ಲಿ ನಡೆದಿತ್ತು. 1427ರಲ್ಲಿ ರಾವ್ ರಣಮಲ್ ಇಲ್ಲಿ ಅಧಿಕಾರ ವಹಿಸಿಕೊಂಡರೂ, 1433ರಲ್ಲಿ ಚಿತ್ತೂರಿನಲ್ಲಿ ಅವರ ಹತ್ಯೆಯಾಯಿತು. ಆದರೆ ಹತ್ಯೆ ನಡೆದ ಸಮಯದಲ್ಲಿ ಅವರ ಮಗ ರಾವ್ ಜೋಧಾ ತಪ್ಪಿಸಿಕೊಂಡು ಹೋಗಿ, ಸುಮಾರು 15 ವರ್ಷಗಳ ಶ್ರಮದ ನಂತರ ಮಾಂಡೋರನ್ನು ಮರಳಿ ವಶಪಡಿಸಿಕೊಂಡ. ಆದರೂ, ಈ ಸ್ಥಳದ ರಕ್ತಸಿಕ್ತ ನೆನಪುಗಳಿಂದ ಹೊರಬರಲಾಗದೆ, 1459ರಲ್ಲಿ ರಾವ್ ಜೋಧಾ ರಾಜಧಾನಿಯನ್ನು ಜೋಧಪುರಕ್ಕೆ ಸ್ಥಳಾಂತರಿಸಿದರು.

ಸ್ಥಳ ಪುರಾಣದ ಪ್ರಕಾರ, ಮಾಂಡೋರ್ ರಾವಣನಿಗೆ ವಿಶೇಷ ಸಂಬಂಧ ಹೊಂದಿದೆ. ರಾವಣ ಇಲ್ಲಿ ಮಂಡೋದರಿಯನ್ನು ವಿವಾಹವಾದನೆಂದು ನಂಬಲಾಗಿದೆ. ಈ ಕಾರಣಕ್ಕೆ ಇಂದಿಗೂ ಸ್ಥಳೀಯರು ರಾವಣನನ್ನು ತಮ್ಮ ಊರಿನ ಅಳಿಯ ಎಂದು ಕರೆಯುತ್ತಾರೆ. ಇಲ್ಲಿರುವ ರಾವಣನ ದೇವಾಲಯ ಈ ಸ್ಥಳದ ವಿಶಿಷ್ಟ ಆಕರ್ಷಣೆ ಎಂದರೆ ತಪ್ಪಾಗಲಾರದು, ಕೋಟೆಯ ಒಳಗಿನ ದೇವಾಲಯಗಳು ಕಾಲಾಂತರದಲ್ಲಿ ಶಿಥಿಲಗೊಂಡರೂ, ಇಲ್ಲಿನ ಸ್ಮಾರಕಗಳು ರಾಜರ ಗತ ವೈಭವವನ್ನು ಇಂದಿಗೂ ಪ್ರತಿಬಿಂಬಿಸುತ್ತವೆ. 1793ರಲ್ಲಿ ನಿರ್ಮಿತವಾದ ಅಜಿತ್ ಸಿಂಗ್ ಸ್ಮಾರಕವು ಕಲಾತ್ಮಕ ಕೆತ್ತನೆಯಿಂದ ಕೂಡಿದೆ. ಕೆಂಪು ಮರಳುಗಲ್ಲಿನಲ್ಲಿ ನಿರ್ಮಿತವಾದ ಛತ್ರಿ ಆಕಾರದ ಸ್ಮಾರಕಗಳು, ಕಂಬಗಳು ಮತ್ತು ಶಿಖರಗಳು ಇತಿಹಾಸದ ಒಂದು ಯುಗವನ್ನು ಜೀವಂತವಾಗಿಡುತ್ತವೆ. ಇದರ ಜತೆಗೆ, ಸರ್ಕಾರಿ ವಸ್ತುಸಂಗ್ರಹಾಲಯದ ಹಾಲ್ ಆಫ್ ಹೀರೋಸ್‌ನಲ್ಲಿ 16 ಜಾನಪದ ವೀರರ ಕೆತ್ತನೆಯನ್ನು ಒಂದೇ ಕಲ್ಲಿನಲ್ಲಿ ರಚಿಸಲಾಗಿದ್ದು, ಇದು ಸಾಂಸ್ಕೃತಿಕ ಪರಂಪರೆಯ ಸಂಕೇತವಾಗಿದೆ. ಪಕ್ಕದಲ್ಲಿಯೇ 33 ಕೋಟಿ ದೇವರುಗಳ ದೇವಾಲಯ ಎಂಬ ಸಭಾಂಗಣವಿದ್ದು, ವಿವಿಧ ದೇವತೆಗಳ ಕೆತ್ತನೆಗಳು ಮತ್ತು ವರ್ಣಚಿತ್ರಗಳು ಗಮನ ಸೆಳೆಯುತ್ತವೆ.

ಇಲ್ಲಿನ ಉದ್ಯಾನವನವು ರಾತ್ರಿಯಲ್ಲಿ ಬೆಳಕಿನ ವ್ಯವಸ್ಥೆಯಿಂದ ಇನ್ನಷ್ಟು ಆಕರ್ಷಕವಾಗಿ ಕಾಣುತ್ತದೆ. ಬೆಳಗ್ಗೆ 8 ರಿಂದ ರಾತ್ರಿ 8 ರವರೆಗೆ ತೆರೆದಿರುವ ಈ ಉದ್ಯಾನವನಕ್ಕೆ ಪ್ರವೇಶ ಶುಲ್ಕವೂ ಕಡಿಮೆ. ಆದರೂ, ಜೋಧಪುರದ ಮೆಹ್ರಾನ್‌ಘಡ್, ಉಮ್ಮೈದ್ ಅರಮನೆ, ಜಸ್ವಂತ್ ಥಾಡ್ ನಂತಹ ಪ್ರಸಿದ್ಧ ಸ್ಥಳಗಳಿಗೆ ಭೇಟಿ ನೀಡುವವರು ಮಾಂಡೋರ್‌ನ ಈ ಅಪರೂಪದ ಸೌಂದರ್ಯವನ್ನು ಕಡೆಗಣಿಸುವುದು ಸಾಮಾನ್ಯ ಸಂಗತಿಯಾಗಿದೆ. ಇನ್ನಾದರೂ ಪ್ರವಾಸಿಗರು ಈ ಪೌರಾಣಿಕ ಮತ್ತು ಐತಿಹಾಸಿಕ ಮಹತ್ವ ಇರುವ ಮಾಂಡೋರ್ ನ ರಾವಣ ದೇಗುಲಕ್ಕೆ ಹಾಗೂ ಇಲ್ಲಿಯ ಇನ್ನಿತರ ಆಕರ್ಷಣೀಯ ಸ್ಥಳಗಳಿಗೆ ಭೇಟಿ ನೀಡಲಿ.

**ಮಾಂಡೋರ್ ತಲುಪುವುದು ಹೇಗೆ?:** ಜೋಧಪುರದಿಂದ ಕೇವಲ 10 ಕಿಮೀ ದೂರದಲ್ಲಿರುವ ಮಾಂಡೋರ್‌ಗೆ ಸ್ವಂತ ವಾಹನ ಅಥವಾ ಸ್ಥಳೀಯ ಸಾರಿಗೆಯ ಮೂಲಕ ಸುಲಭವಾಗಿ ತಲುಪಬಹುದು. ಜೋಧಪುರಕ್ಕೆ ರೈಲು, ರಸ್ತೆ ಮತ್ತು ವಿಮಾನ ಸಂಪರ್ಕವಿದೆ. ಜೋಧಪುರದ ಪ್ರಸಿದ್ಧ ಸ್ಥಳಗಳ ಜೊತೆಗೆ ಮಾಂಡೋರ್‌ನ ಈ ಐತಿಹಾಸಿಕ ಖಜಾನೆಯನ್ನು ಒಮ್ಮೆಯಾದರೂ ಭೇಟಿಯಾಗಿ ನೋಡಲೇಬೇಕು!



# ಪರಸ್ಪರ ಸಹಕಾರದಿಂದ ಸಹಕಾರಿ ಕ್ಷೇತ್ರ ಬೆಳವಣಿಗೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಒಬ್ಬರಿಗೊಬ್ಬರ ಸಹಕಾರದಿಂದ ಮಾತ್ರ ಸಹಕಾರಿ ಕ್ಷೇತ್ರ ಉನ್ನತಮಟ್ಟದಲ್ಲಿ ಬೆಳೆಯಲು ಸಾಧ್ಯ, ಸಹಕಾರಿ ಸಂಸ್ಥೆಗಳಲ್ಲಿ ಪ್ರಮಾಣಿಕತೆ ಮತ್ತು ಒಳ್ಳೆಯ ಭಾವನೆಗಳೊಂದಿಗೆ ಕೆಲಸ ಮಾಡಲು ಮುಂದದಾಗ ಮಾತ್ರ ರೈತರಿಗೆ ಅನುಕೂಲ ಮಾಡಲು ಸಾಧ್ಯವೆಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.



ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ 2024 –25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿ ತತ್ವದಡಿ ಎಲ್ಲರೂ ಸಾಗಿದರೇ ಉತ್ತಮ ಬದುಕು ಕಟ್ಟಿಕೊಳ್ಳಬಹುದು, ರೈತರ ಅಭ್ಯದಯಕ್ಕಾಗಿ ಜಿಲ್ಲೆಯಲ್ಲಿ ಸಹಕಾರಿ ಕ್ಷೇತ್ರವನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೆಗೌಡರು ಉನ್ನತ ಮಟ್ಟಕ್ಕೆ ಬೆಳೆಸಿದ್ದಾರೆ. ಜಿಲ್ಲೆಯ ಸಹಕಾರಿ ರಂಗವೂ ಒಂದು ಹಂತದಲ್ಲಿ ತನ್ನ ನೌಕರಿಗೆ ಸಂಬಳ ಕೊಡಲು ಹಣವಿಲ್ಲದೆ ಸೊರಗಿತ್ತು. ಆಗ ದೇವೆಗೌಡರು ಮುಖ್ಯಮಂತ್ರಿಗಳಾಗಿದ್ದ ವೇಳೆ ಅವರು ರೂಪಿಸಿದ ಪೈಲೆಟ್ ಯೋಜನೆಯ ಫಲವಾಗಿ ಇಂದು ಜಿಲ್ಲೆಯ ಸಹಕಾರಿ ಕ್ಷೇತ್ರವೂ 2 ಸಾವಿರ ಕೋಟಿ ರೂ. ಗಳ ವಹಿವಾಟು ಮಾಡುತ್ತಿದೆ. ಜಿಲ್ಲೆಯಲ್ಲಿ 1300 ಕೋಟಿ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ನೀಡಲಾಗಿದೆ ಎಂದು ಹೇಳಿದರು.

ಮೈಸೂರು ರಸ್ತೆಯಲ್ಲಿನ ಟಿಎಪಿಸಿಎಂಎಸ್ ಭವನ ಪಾಳು ಬಿದ್ದಿತ್ತು. ಅಲ್ಲೀಗ ಒಂದು ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಿ ಆರ್ಥಿಕ ಮೂಲವನ್ನಾಗಿಸಲಾಗಿದೆ. ಕಳೆದ 5 ವರ್ಷಗಳಲ್ಲಿ ಗೊಬ್ಬರ ಮಾರಾಟದಲ್ಲಿ 15 ಕೋಟಿ ರೂ. ವಹಿವಾಟು ನಡೆಸಿದ್ದು, ಲಾಭದ ದೃಷ್ಠಿಯಿಂದ ಮಾಡದೇ ಸೇವೆಯ ದೃಷ್ಠಿಯಿಂದ ಗೊಬ್ಬರ ಮಾರಾಟ ಮಾಡಲಾಗುತ್ತಿದೆ. ಇದೀಗ ಹಳೇ ಕಟ್ಟಡಗಳ ನವೀಕರಣಗೊಳಿಸಿ, ಟಿಎಪಿಸಿಎಂಸ್ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂದಿನ ಮೂರು ತಿಂಗಳಲ್ಲಿ ಇಲ್ಲಿನ ಆವರಣಕ್ಕೆ ಕಾಂಕ್ರೀಟ್ ನೆಲಹಾಸು ಹಾಕಿಸಲಾಗುವುದು ಎಂದರು.

ಸಿ.ಎನ್.ಪುಟ್ಟಸ್ವಾಮೀಗೌಡ ಅವರು ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕರಾದ ನಂತರ ತಾಲ್ಲೂಕಿಗೆ 92 ಲಕ್ಷ ರೂ. ಅನುದಾನ ನೀಡಿದ್ದಾರೆ. ಟಿಎಪಿಸಿಎಂಎಸ್ ಕಟ್ಟಡಗಳಿಗೆ 40 ಲಕ್ಷ ರೂ. ಸೇರಿ ತಾಲ್ಲೂಕಿನ ಹಲವು ಕೃಷಿಪತ್ತಿನ ಸಹಕಾರ ಸಂಘಗಳಿಗೆ 1 ರಿಂದ 5 ಲಕ್ಷ ರೂ. ವರೆಗೆ ಸಹಾಯಧನ ನೀಡಲು ಕಾರಣೀಕರ್ತರಾಗಿದ್ದಾರೆ. ತಾಲ್ಲೂಕಿನಲ್ಲಿ 400 ಕೋಟಿ ರೂ. ಹೈನುಗಾರಿಕೆ ಮೂಲಕ ರೈತರ ಕಿಸೆ ಸೇರುತ್ತಿದೆ. ರೈತರ ಆರ್ಥಿಕ ಮೂಲವಾಗಿರುವ ಹೈನುಗಾರಿಕೆಯನ್ನು ಕಳೆದ 25 ವರ್ಷಗಳಿಂದ ಶಕ್ತಿ ತುಂಬುವ ಕೆಲಸ ಮಾಡುತ್ತಾ ಬರಲಾಗಿದೆ ಎಂದರು.

ಸಂಘದ ಅಧ್ಯಕ್ಷ ಎಂ.ಆರ್. ಅನಿಲ್‌ಕುಮಾರ್ ಮಾತನಾಡಿ, ವಾರ್ಷಿಕ ಸಭೆಯ ಮೂಲಕ ಷೇರುದಾರರು ಮತ್ತು ಆಡಳಿತ ಮಂಡಳಿಯ ನಡುವಿನ ಸಂಬಂಧ ಗಟ್ಟಿಗೊಳ್ಳಿಸುವ ಕೆಲಸವಾಗುತ್ತಿದೆ. ಆಯಾ ವರ್ಷದ ಖರ್ಚು ವೆಚ್ಚವನ್ನು ಸದಸ್ಯರಿಗೆ ಒಪ್ಪಿಸುವ ಕೆಲಸವನ್ನು ಪ್ರಮಾಣಿಕವಾಗಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಸಂಸ್ಥೆಯ ಅಭಿವೃದ್ಧಿಗೆ ನಿಮ್ಮ ಸಲಹೆ, ಸೂಚನೆ ಅಗತ್ಯ. ರೈತರಿಗೆ ರಿಯಾಯ್ತಿ ದರದಲ್ಲಿ ಗೊಬ್ಬರ ಮಾರಾಟ ಮಾಡುತ್ತಿದ್ದು, ನಮ್ಮ ಸಂಘವು ರಸಗೊಬ್ಬರ ಮಾರಾಟದಲ್ಲಿ ಮೈಸೂರು ವಲಯದಲ್ಲಿ ಅತ್ಯುತ್ತಮ ಮಾರಾಟ ಮಾಡಿದ ಹೆಗ್ಗಳಿಕೆ ಹೊಂದಿ ರಾಜ್ಯ ಪ್ರಶಸ್ತಿ ಗಳಿಸಿದೆ. ಇದು ನಮಗೆ ಮತ್ತಷ್ಟು ಪ್ರೇರಣೆಯಾಗಿದೆ. ರೈತವರ್ಗಕ್ಕೆ ಬೇಕಾದ ಅನುಕೂಲಗಳನ್ನು ರೂಪಿಸುವಲ್ಲಿ ನಾವು ಬದ್ಧರಾಗಿದ್ದೇವೆ. ಶಾಸಕರ ಅಣತಿ ಮೇರೆಗೆ ಸಂಘವು ಅವರ ಸಹಕಾರದಿಂದ ಉತ್ತಮ ಯೋಜನೆಗಳನ್ನು ರೂಪಿಸುವಲ್ಲಿ ಮುಂದಾಗಿದೆ ಎಂದು ಮಾಹಿತಿ ನೀಡಿದರು.

ಇದೇ ಮೊದಲ ಬಾರಿಗೆ ತಾಲ್ಲೂಕಿನ ಹಿರಿಯ ಸಹಕಾರಿಗಳನ್ನು ಗುರುತಿಸಿ ಅಭಿನಂದಿಸುವ ಕೆಲಸವನ್ನು ಪ್ರಸ್ತಕ ವರ್ಷದಿಂದ ಮಾಡಲಾಗುತ್ತಿದ್ದು, ಶಾಸಕರು ಸೂಚನೆ ಮೇರೆಗೆ ಇದನ್ನು ಪ್ರತಿವರ್ಷ ಮುಂದುವರೆಸಿಕೊಂಡು ಹೋಗಲಾಗುವುದು ಎಂದರು.

ಟಿಎಪಿಸಿಎಂಎಸ್ ನಿಂದ ಅತಿ ಹೆಚ್ಚು ಗೊಬ್ಬರ ಖರೀದಿಸಿದ ನಾಲ್ವರು ರೈತರನ್ನು ಇದೇ ಸಂದರ್ಭದಲ್ಲಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳದ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಪುರಸಭಾ ಅಧ್ಯಕ್ಷ ಮೋಹನ್, ಉಪಾಧ್ಯಕ್ಷೆ ಕವಿತಾರಾಜು, ಸದಸ್ಯರುಗಳಾದ ರೇಖಾ ಅನಿಲ್, ಬನಶಂಕರಿ, ರಾಣಿಕೃಷ್ಣ, ಲಕ್ಷ್ಮಮ್ಮ, ಸುಜಾತ, ಹೆಚ್.ಎಸ್.ಎಸ್.ಕೆ. ಅಧ್ಯಕ್ಷ ವೆಂಕಟೇಶ್, ಕೃಷಿ ಸಹಾಯಕ ನಿರ್ದೇಶಕ ಮೋಹನ್, ಟಿಎಪಿಸಿ ಎಂಎಸ್ ನ ಉಪಾಧ್ಯಕ್ಷ ಯೋಗೇಶ್ ಗುರಿಗಾರನಹಳ್ಳಿ, ನಿರ್ದೇಶಕರುಗಳಾದ ವಿ.ಎನ್. ರಾಜಣ್ಣ, ಬಿ.ಹೆಚ್.ಶಿವಣ್ಣ, ಪರಮಕೃಷ್ಣೇಗೌಡ, ಕೆ.ಎಂ.ರಮೇಶ್, ಸಿ.ಜಿ. ಜಗದೀಶ್, ಚಂದ್ರಕಲಾ ಮಂಜೇಗೌಡ, ಬಿ.ಕೆ.ಮನು, ಎಸ್.ಜಿ. ಚಿರಂಜೀವಿ, ಕಾರ್ಯದರ್ಶಿ ಸಂಧ್ಯಾ ಸಿಬ್ಬಂದಿ ಹಾಜರಿದ್ದರು.

# ಗಣೇಶ ವೀಕ್ಷಣೆಗೆ ಹೋದವರು ಬಾರದ ಲೋಕಕ್ಕೆ ಪಯಣ..!



» ಒಂದನೇ ಪುಟದಿಂದ

ಗಳಿಸಿದ ಮಗ ಇಂಜಿನೀಯರ್ ಆಗಿ ಕೊನೆಗಾಲದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾನೆಂದು ಕನಸು ಕಂಡಿದ್ದರು. ಮಗ ಇನ್ನೇನು ವ್ಯಾಸಂಗ ಮುಗಿಸಿ ಕ್ಯಾಂಪಸ್ ಸಂದರ್ಶನದಲ್ಲೂ ಪಾಸಾಗಿ ಮನೆಗೆ ಆಧಾರವಾಗುತ್ತಾನೆಂಬ ಅವರ ಭರವಸೆಯನ್ನು ಮೊಸಳೆಹೊಸಳ್ಳಿ ಗಣೇಶೋತ್ಸವ ಚಿವುಟಿ ಹಾಕಿದೆ.

ಇನ್ನು ಹೊಸದುರ್ಗ ತಾಲ್ಲೂಕು ಗವಿರಂಗಾ ಪುರದ ಮಿಥುನ್ ತೀರಾ ಬಡಕುಟುಂಬದಿಂದ ಬಂದಿದ್ದು ಅವರ ತಂದೆ ವಿಜಯನಾಗರಾಜು ದೇವಸ್ಥಾನವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಮಿಥುನ್‌ಗೆ ಇಬ್ಬರು ಸಹೋದರಿಯರಿದ್ದು ಇನ್ನೇನು ನಾನು ನೌಕರಿ ಪಡೆಯುತ್ತೇನೆ. ನಿಮ್ಮನ್ನೆಲ್ಲ ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಭರವಸೆ ನೀಡಿದ್ದ. ಸ್ನೇಹಿತರೊಂದಿಗೆ ಹುಟ್ಟುಹಬ್ಬ ಆಚರಿಸಿ ಕೊಂಡಿದ್ದ ಮಿಥುನ್ ಕೇಕ್ ಕತ್ತರಿಸಿ ಊಟ ಮಾಡಿಕೊಂಡು ಮೆರವಣಿಗೆ ವೀಕ್ಷಣೆಗೆ ತೆರಳಿದವನು ವಾಪಾಸ್ ಬರಲೇ ಇಲ್ಲ. ಜೊತೆಗೆ ಸುರೇಶ್‌ನ ಜೀವನಗಾಥೆಯು ಇದಕ್ಕಿಂತ ಭಿನ್ನವಾಗಿರಲಿಲ್ಲ.

**ಹಲವರ ಪ್ರಾಣ ಉಳಿಸಿದ ಕಬ್ಬಡಿ ಕ್ರೀಡೆ:** ಮಧ್ಯಾಹ್ನ 3.30ಕ್ಕೆ ಗ್ರಾಮದಲ್ಲಿ ಗಣೇಶೋತ್ಸವ ಮೆರವಣಿಗೆ ಪ್ರಾರಂಭವಾಗಿತ್ತಾದರೂ ಇಂಜಿನೀಯರಿಂಗ್ ವಿದ್ಯಾರ್ಥಿಗಳು ಕಾಲೇಜು ಮುಗಿಸಿ ಸಂಜೆ 5 ಗಂಟೆ ವೇಳೆಗೆ ಹಾಸ್ಟೆಲ್‌ಗೆ ಬಂದಿದ್ದರು. ಮೆರವಣಿಗೆಯಲ್ಲಿ ಡಿಜೆ ಇರುವುದನ್ನು ಖಚಿತಪಡಿಸಿಕೊಂಡಿದ್ದ ಅವರು ಅಲ್ಲಿಗೆ ತೆರಳಲು ಸಿದ್ಧತೆ ನಡೆಸಿದ್ದರು. ಕೆಲವರು 7 ಗಂಟೆಗೆ ಹಾಸ್ಟೆಲ್‌ನಿಂದ ಹೊರಟರೆ ಹಲವರು ಡೈನಿಂಗ್ ಹಾಲ್‌ನಲ್ಲಿ ಊಟ ಮಾಡುತ್ತಿದ್ದರು. ಇನ್ನು ಕೆಲವು ವಿದ್ಯಾರ್ಥಿಗಳು ಪ್ರೊ ಕಬ್ಬಡಿ ಲೀಗ್ ಅನ್ನು ಮೊಬೈಲ್‌ನಲ್ಲಿ ವೀಕ್ಷಿಸುತ್ತಾ ಕುಳಿತಿದ್ದರು. ಗಣೇಶ ಮೂರ್ತಿ ಮೆರವಣಿಗೆ ಬರ್‍ತಿದೆ ಹೋಗೋಣ ಬಾ ಎಂದಾಗ ಲೇಟಾಗಿ ಬರ್‍ತಿವಿ ಕಬ್ಬಡಿ ನೋಡ್ತಿದಿವಿ ಎಂದಿದ್ದರು. ಇನ್ನೇನು ಅವರು ಅಲ್ಲಿಗೆ ತೆರಳಬೇಕೆನ್ನುವಷ್ಟರಲ್ಲಿ ಘೋರ ದುರಂತದ ಸುದ್ದಿ ಕಿವಿಗೆ ತಾಗಿದೆ.

ಹಾಸ್ಟೆಲ್‌ನಲ್ಲಿ 120 ವಿದ್ಯಾರ್ಥಿಗಳಿದ್ದು ಮೆರವಣಿಗೆ ವೀಕ್ಷಣೆಗೆ ತೆರಳಿದ್ದ ಮೂವರು ಮೃತ ಪಟ್ಟಿದ್ದರೆ 11 ಯುವಕರು ಗಂಭೀರ ಗಾಯಗೊಂಡಿದ್ದಾರೆ. ಅದರಲ್ಲಿ ಇಬ್ಬರು ಕಾಲೇಜಿನ ಡಿ ಗ್ರೂಪ್ ಸಿಬ್ಬಂದಿಯೂ ಇದ್ದಾರೆ.

**ಕಾಲೇಜಿಗೆ ರಜೆ-ಮೌನ**

ಕಾಲೇಜು ವಿದ್ಯಾರ್ಥಿಗಳ ದುರಂತ ಸಾವು ಹಿನ್ನಲೆಯಲ್ಲಿ ಶನಿವಾರ ಇಂಜಿನೀಯರಿಂಗ್ ಕಾಲೇಜಿಗೆ ರಜೆ ಘೋಷಿಸಲಾಗಿತ್ತು. ಬೋಧಕ ಸಿಬ್ಬಂದಿ ಹಾಗು ವಿದ್ಯಾರ್ಥಿಗಳು ಸ್ನೇಹಿತರ ಅಗಲಿಕೆಗೆ ಶ್ರದ್ಧಾಂಜಲಿ ಸಲ್ಲಿಸಿದರು. ಹಾಸ್ಟೆಲ್‌ನಲ್ಲೂ ಗಾಢ ಮೌನ ಆವರಿಸಿತ್ತು.

**ರಾಜ್ಯಕ್ಕೆ ಹೆಸರುವಾಸಿ ಕಾಲೇಜು**

ರಾಜ್ಯದ 16 ಸರ್ಕಾರಿ ಇಂಜಿನೀಯರಿಂಗ್ ಕಾಲೇಜುಗಳ ಪೈಕಿ ಅಧಿಕ ವಿದ್ಯಾರ್ಥಿಗಳನ್ನು ಹೊಂದಿದ ಹಾಗು ಉತ್ತಮ ಫಲಿತಾಂಶಗಳ ಪಟ್ಟಿಯಲ್ಲಿ ಮೊಸಳೆಹೊಸಹಳ್ಳಿ ಕಾಲೇಜಿಗೆ ಮೊದಲ ಸ್ಥಾನವಿದೆ. 2019ರಲ್ಲಿ ಪ್ರಾರಂಭವಾದ ಕಾಲೇಜಿನಲ್ಲೀಗ 1,058 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಹಾಸನ ಸುತ್ತಲಿನ ಮಾತ್ರವಲ್ಲದೆ ಬಳ್ಳಾರಿ, ಕೊಪ್ಪಳ, ಚಿತ್ರದುರ್ಗ, ರಾಯಚೂರು ಮೂಲದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಈ ದುರಂತ ತುಂಬಲಾಗದ ನೋವನ್ನುಂಟು ಮಾಡಿದೆ.

# ಪರಿಹಾರ 10 ಲಕ್ಷ ರೂ.ಗೆ ಹೆಚ್ಚಿಸಿ: ದೇವೇಗೌಡ್ರು

» ಒಂದನೇ ಪುಟದಿಂದ

ಕೂರಲು ಮನಸ್ಸು ತಡೆಯಲಿಲ್ಲ. ಹಾಗಾಗಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಲು ಬಂದಿದ್ದೇನೆ. ಭಾನುವಾರವೂ ಇಲ್ಲೇ ಇರುತ್ತೇನೆ, ಕೆಲ ಭಾಗಕ್ಕೆ ಭೇಟಿ ನೀಡುತ್ತೇನೆ. ನಮ್ಮ ಪಕ್ಷದ ಶಾಸಕರು ಅಪಘಾತದ ವಿಷಯ ತಿಳಿದ ತಕ್ಷಣ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸಲು ನೆರವಾಗಿದ್ದಾರೆ. ನನ್ನ ಮಗ ಹೆಚ್.ಡಿ.ರೇವಣ್ಣ, ಮೊಮ್ಮೊಗ ಡಾ.ಸೂರಜ್ ರೇವಣ್ಣ ಕೂಡ ರಾತ್ರಿಯೇ ಸ್ಥಳಕ್ಕೆ ಭೇಟಿ ನೀಡಿ ಸ್ಪಂದಿಸುವ ಕೆಲಸ ಮಾಡಿದ್ದಾರೆಂದು ಹೇಳಿದರು.

ಕಾಡಾನೆ ದಾಳಿಯಿಂದ ಪಕ್ಕದ ರಾಜ್ಯದ ವ್ಯಕ್ತಿ ಮೃತಪಟ್ಟಾಗ ಸರ್ಕಾರ ಹೇಗೆ ಪರಿಹಾರ ನೀಡಿತೋ ಅದೇ ರೀತಿ ಇಲ್ಲೂ ಪರಿಹಾರ ನೀಡುವ ಕೆಲಸವಾಗಬೇಕು. ದುಡಿಯುವ ಮಕ್ಕಳನ್ನು ಕಳೆದುಕೊಂಡು ಆ ಕುಟುಂಬಗಳು ಅಸಹಾಯಕವಾಗಿವೆ. ರಾಜ್ಯದಲ್ಲಿ ನಾನಾ ಸಮಸ್ಯೆಗಳಿವೆ ಅದನ್ನೆಲ್ಲ ಗಮನದಲ್ಲಿಟ್ಟುಕೊಂಡು, ನಾನು ರಾಜಕೀಯ ಬೆರೆಸದೆ ಪರಿಹಾರ ಹೆಚ್ಚಿಸುವಂತೆ ವಿನಂತಿಸುತ್ತೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಿಂದೆ ನಮ್ಮ ಪಕ್ಷದಲ್ಲಿದವರು, ನಾವೆಲ್ಲ ಒಟ್ಟಿಗೆ ಕೆಲಸ ಮಾಡಿದ್ದೇವೆ. ಆದರೂ ಪರಿಹಾರ ಮೊತ್ತ ಹೆಚ್ಚಿಸಬೇಕೆಂದು ಮುಖ್ಯಮಂತ್ರಿ ಕೈ ಹಿಡಿದು ಬರೆಸಲು ಸಾಧ್ಯವಿಲ್ಲ. ಹಾಗಾಗಿ ಮನವಿ ಮಾಡುತ್ತಿದ್ದೇನೆಂದು ಹೇಳಿದರು.

ನಮ್ಮಲ್ಲಿ ಗಣೇಶ ಉತ್ಸವವನ್ನು ಸಂಪ್ರದಾಯದಂತೆ ಪ್ರತಿ ಊರಿನಲ್ಲಿ ಇಟ್ಟು ಪೂಜೆ ಮಾಡುತ್ತಾರೆ. ಈ ವಿಚಾರದಲ್ಲಿ ಜಾತಿಯನ್ನು ತರುವುದಿಲ್ಲ, ರಾಜಕೀಯ ಮಾಡುವುದಿಲ್ಲ. ರಾಜಕೀಯ ಮಾಡಲು ಬೇಕಾದಷ್ಟು ವಿಷಯಗಳಿವೆ. ನಮ್ಮ ಹುಡುಗರು ಗಣೇಶ ವಿಸರ್ಜನಾ ಮಹೋತ್ಸವವನ್ನು ಆನಂದದಿಂದ ಆಚರಿಸುವಾಗ ಪೊಲೀಸರು ಜಾಗ್ರತೆ ತೆಗೆದುಕೊಂಡಿದ್ದರೆ ಅನಾಹುತ ನಡೆಯುತ್ತಿರಲಿಲ್ಲ ಎಂದರು.

ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಶಾಸಕರಾದ ಎ.ಮಂಜು, ಸಿ.ಎನ್. ಬಾಲಕೃಷ್ಣ, ಹೆಚ್.ಪಿ. ಸ್ವರೂಪ್, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಇನ್ನಿತರರಿದ್ದರು.

# ಸಾವಿನ ಮೆರವಣಿಗೆ ಸ್ಥಳಕ್ಕೆ ಸಚಿವರ ಭೇಟಿ, ಸಾಂತ್ವನ

» ಒಂದನೇ ಪುಟದಿಂದ

ಬೆಳಿಗ್ಗೆ 9 ಗಂಟೆಗೆ ಶಾಂತಿ ಗ್ರಾಮಕ್ಕೆ ಬಂದ ಅವರು ಅಲ್ಲಿನ ಕರ್ನಾಟಕ ಪಬ್ಲಿಕ್ ಸ್ಕೂಲ್‌ನಲ್ಲಿ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಉಪ ವಿಭಾಗಾಧಿಕಾರಿ ಮಾರುತಿ ಇದ್ದರು. ಅಲ್ಲಿಂದ ಮೊಸಳೆಹೊಸಳ್ಳಿ ಘಟನಾ ಸ್ಥಳಕ್ಕೆ ಬಂದರು. ಕ್ಯಾಂಟರ್ ಡಿಕ್ಕಿ ಮಾಡಿದ ಸ್ಥಳ ಪರಿಶೀಲಿಸಿದರು.



ನಂತರ ಮೃತರಾದ ಬಂಟರಹಳ್ಳಿಯ ಪ್ರಭಾಕರ್, ಡಣಾಯಕನಹಳ್ಳಿ ಈಶ್ವರ್, ಮುತ್ತಿ ಹಿರಿಹಳ್ಳಿಯ ಗೋಕುಲ್, ಕಬ್ಬಿನಹಳ್ಳಿ ಕುಮಾರ್ ಮತ್ತು ಪ್ರವೀಣ್ ಅವರ ಮನೆಗಳಿಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಸರ್ವಿಸ್ ರಸ್ತೆ ನಿರ್ಮಿಸಿಕೊಡಿ

ಸ್ಥಳ ಪರಿಶೀಲಿಸುತ್ತಿದ್ದಾಗ ಸಚಿವರನ್ನು ತಡೆದ ಗ್ರಾಮಸ್ಥರು ಸಮಸ್ಯೆ ಹೇಳಿಕೊಂಡರು. ಸಿಂಗಲ್ ರಸ್ತೆ ಇದ್ದಾಗ ಗ್ರಾಮದಲ್ಲಿ ಹಂಪ್ ಗಳಿದ್ದವು. ರಾಷ್ಟ್ರೀಯ ಹೆದ್ದಾರಿ ಆದ ಬಳಿಕ ಹಂಪ್ಸ್ ಇಲ್ಲದೆ ವೇಗವಾಗಿ ಚಲಿಸುತ್ತಾರೆ. ಜೊತೆಗೆ ಇಲ್ಲಿ ಸರ್ವಿಸ್ ರಸ್ತೆಯೂ ಇಲ್ಲ. ಅವೈಜ್ಞಾನಿಕ ರಸ್ತೆ ಕಾಮಗಾರಿಯೇ ಅವಘಡಕ್ಕೆ ಕಾರಣವೆಂದರು.

ವಿಮಾನ ಅಪಘಾತದಲ್ಲಿ ಮೃತಪಟ್ಟವರಿಗೆ 1 ಕೋಟಿ ರೂ., ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ 25 ಲಕ್ಷ ರೂ. ಪರಿಹಾರ ನೀಡಲಾಗಿದೆ. ಇಲ್ಲಿ ಸಾವಿಗೀಡಾದವರಿಗೂ 25 ಲಕ್ಷ ರೂ. ಕೊಡಬೇಕು. ಸರ್ಕಾರ ಕೇವಲ 5 ಲಕ್ಷ ರೂ. ಘೋಷಿಸಿದ್ದು ಅಷ್ಟು ಹಣವನ್ನು ಸಾರ್ವಜನಿಕರೇ ಚಂದಾ ಎತ್ತಿ ಕುಟುಂಬಸ್ಥರಿಗೆ ಕೊಡುತ್ತೇವೆಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

**ಕ್ಯಾಂಟರ್ ಡಿಕ್ಕಿಯಾದ ಬೈಕ್ ಸವಾರ ಸಾವು:** ಕ್ಯಾಂಟರ್ ಮೊದಲು ಬೈಕ್‌ಗೆ ಡಿಕ್ಕಿಯಾಗಿ ಆ ನಂತರ ಡಿವೈಡರ್‌ಗೆ ಅಪ್ಪಳಿಸಿ ಯುವಕರ ಮೇಲೆ ಹರಿಯುತ್ತದೆ. ಅವಘಡಕ್ಕೆ ಬೈಕ್‌ಗೆ ಡಿಕ್ಕಿಯಾಗಿದ್ದೇ ಮೂಲ ಕಾರಣ ಎನ್ನಲಾಗಿದ್ದು ಆ ಬೈಕ್ ಸವಾರ ಬಂಟರಹಳ್ಳಿಯ ಪ್ರಭಾಕರ್ (55) ಮೃತಪಟ್ಟಿದ್ದರು.

# ರಸ್ತೆ ಉಬ್ಬು ನಿರ್ಮಾಣಕ್ಕೆ ಸಿದ್ಧತೆ



• ಪ್ರಜೋದಯ ವರದಿ

**ಹಾಸನ:** ಮೊಸಳೆ ಹೊಸಳ್ಳಿಯಲ್ಲಿ ಭೀಕರ ಅಪಘಾತ ನಡೆದ ರಸ್ತೆಯ 500 ಮೀಟರ್ ಅಂತರದಲ್ಲಿ 6 ರಸ್ತೆ ಉಬ್ಬು ನಿರ್ಮಾಣಕ್ಕೆ ಅಧಿಕಾರಿಗಳು ಮುಂದಾಗಿದ್ದಾರೆ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಪಿಡಬ್ಲ್ಯೂಡಿ ಹಾಗು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದಾರೆ. ಹೆಚ್ಚುವರಿ ಜಿಲ್ಲಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ಅಧಿಕಾರಿಗಳು ರಸ್ತೆ ಉಬ್ಬು ನಿರ್ಮಾಣಕ್ಕೆ ಸ್ಥಳ ಗುರುತು ಮಾಡಿದ್ದಾರೆ. ಮೊಸಳೆ ಹೊಸಳ್ಳಿ ಸೊಸೈಟಿ ವೃತ್ತ ಸಮೀಪ 2, ಸಮುದಾಯ ಆರೋಗ್ಯ ಕೇಂದ್ರದ ಎದುರು 2 ಸೇರಿ 6 ರಸ್ತೆ ಉಬ್ಬು ನಿರ್ಮಾಣಕ್ಕೆ ನೀಲನಕ್ಷೆ ತಯಾರಿಸಲಾಗಿದೆ.

# ವಿವಿಧೆಡೆ ಅಪಘಾತ: ಐವರ ಸಾವು

» ಒಂದನೇ ಪುಟದಿಂದ

ಬೆಟ್ಟದಪುರದ ಕಡೆಯಿಂದ ವೇಗವಾಗಿ ಬಂದ ಜೀಪ್ ಡಿಕ್ಕಿಯಾಗಿದೆ. ತಲೆ ಮತ್ತು ಎದೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ವಿದ್ಯುತ್ ಸ್ಪರ್ಶದಿಂದ ಯುವಕ ಸಾವು :** ಎಂ.ಸ್ಯಾಂಡ್ ಅನ್ ಲೋಡ್ ಮಾಡುತ್ತಿದ್ದಾಗ ಟಿಪ್ಪರ್‌ನ ಲಿಫ್ಟ್ ಕರೆಂಟ್ ಸ್ಪರ್ಶಿಸಿ ವ್ಯಕ್ತಿ ಮೃತಪಟ್ಟಿರುವ ಘಟನೆ ಅರಕಲಗೂಡು ತಾಲ್ಲೂಕು ಬೇಲಿ ಕರ್ಪೂರವಳ್ಳಿಯಲ್ಲಿ ನಡೆದಿದೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ನಿವಾಸಿ ಅನಿಲ್ (22) ಮೃತ ಯುವಕ. ಕಳೆದ ಐದು ವರ್ಷದಿಂದ ಆಲೂರಿನ ಹೆಚ್.ಆರ್.ವಿಜಯಕುಮಾರ್ ಎಂಬ ಗುತ್ತಿಗೆದಾರನ ಕೈಕೆಳಗೆ ಯುವಕ ಕೆಲಸ ಮಾಡಿಕೊಂಡಿದ್ದ. ಅಗ್ರಹಾರ ಗ್ರಾಮ ಪಂಚಾಯಿತಿಯ ಹೊಸೂರು ಗ್ರಾಮದ ಕಾಲೋನಿಯಲ್ಲಿ ಜೆಜೆಎಂ ನೀರಿನ ಪೈಪ್ ಜೋಡಿಸುತ್ತಿದ್ದಾಗ ಅಲ್ಲಿಗೆ ಟಿಪ್ಪರ್ ಬಂದಿದೆ. ಅನಿಲ್ ಹಾಗು ತಿಪ್ಪೇಶ ಅವರು ಎಂ.ಸ್ಯಾಂಡ್ ಅನ್ನು ಅನ್ ಲೋಡ್ ಮಾಡಿ ನಂತರ ಬೇಲಿ ಕರ್ಪೂರವಳ್ಳಿ ಗ್ರಾಮದ ಸ್ವಾಮಣ್ಣ ಅವರ ಮನೆಯ ಹತ್ತಿರ ಅನ್‌ಲೋಡ್ ಮಾಡುತ್ತಿದ್ದಾಗ ಟಿಪ್ಪರ್ ಚಾಲಕ ಬಟ್ಟೆ ಒಣಹಾಕಿದ ತಂತಿ ತಾಗುತ್ತದೆಂದು ಎಳೆದು ಹಿಡಿದುಕೋ ಎಂದು ತಿಳಿಸಿದ್ದರಿಂದ ಅನಿಲ್ ತಂತಿಯನ್ನು ಹಿಡಿದಿದ್ದಾಗ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಲಿಫ್ಟ್ ಅನ್ನು ಮೇಲೆ ಎತ್ತಿದಾಗ ಕರೆಂಟ್ ತಂತಿಗೆ ತಗುಲಿ ಅವಘಡ ಸಂಭವಿಸಿದೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶ್ರವಣಬೆಳಗೊಳ ಶ್ರೀ ಸಂತಾಪ

**ಶ್ರವಣಬೆಳಗೊಳ:** ಹಾಸನ ತಾಲ್ಲೂಕಿನ ಮೊಸಳೆಹೊಸಳ್ಳಿ ಗಣೇಶ ಮೆರವಣಿಗೆ ವೇಳೆ ಸಂಭವಿಸಿದ ಭೀಕರ ಅಪಘಾತಕ್ಕೆ ಶ್ರವಣಬೆಳಗೊಳ ಶ್ರೀ ದಿಗಂಬರ ಜೈನ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಜಗದ್ಗುರು ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸಂತಾಪ ಸೂಚಿಸಿದ್ದಾರೆ.



ಗಣೇಶ ವಿಸರ್ಜನೆಗಾಗಿ ಮೆರವಣಿಗೆಯಲ್ಲಿ ತೆರಳುತ್ತಿದ್ದ ವರ ಮೇಲೆ ಲಾರಿ ಹರಿದು ಇಂಜಿನೀಯರಿಂಗ್ ವಿದ್ಯಾರ್ಥಿ ಗಳು ಸೇರಿ ಒಂಭತ್ತು ಜನ ಸಾವಿಗೀಡಾಗಿ, ಸುಮಾರು 20ಕ್ಕೂ ಹೆಚ್ಚು ಮಂದಿ ಗಂಭೀರ ಗಾಯಗೊಂಡ ಸುದ್ದಿ ತಿಳಿದು ಅತೀವ ದುಃಖವಾಯಿತು. ಮೃತರ ಆತ್ಮಕ್ಕೆ ಶಾಂತಿ ಸಿಗಲಿ, ಗಾಯಾಳುಗಳು ಆದಷ್ಟು ಶೀಘ್ರ ಗುಣಮುಖರಾಗಲಿ. ಇದೊಂದು ಹೃದಯ ವಿದ್ರಾವಕ ಘಟನೆ. ಈ ದುರಂತದದಲ್ಲಿ ಸಾವನ್ನಪ್ಪಿದವರ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿ ನೀಡಲಿ ಹಾಗೂ ಗಾಯಗೊಂಡ ವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯವರಲ್ಲಿ ಪ್ರಾರ್ಥಿಸುತ್ತೇವೆಂದು ತಿಳಿಸಿದ್ದಾರೆ.

# ಕುಟುಂಬಸ್ಥರ ಆಕ್ರಂದನ..ಅಧಿಕಾರಿಗಳ ಮೌನ.. ಮುಗಿಯದ ಗೋಳು...

» ಒಂದನೇ ಪುಟದಿಂದ

ಕೂದಲೆಳೆ ಅಂತರಲ್ಲಿ ಎರಡು ಬದಿಯ ಚಕ್ರಗಳ ಮಧ್ಯೆ ಸಿಲುಕಿದ್ದರಿಂದ ಪ್ರಾಣ ಉಳಿಯಿತೆಂದು ಅರಸೀಕೆರೆಯ ಇಂಜಿನೀಯರಿಂಗ್ ವಿದ್ಯಾರ್ಥಿ ವಿಷ್ಣು ಕಣ್ಣೀರಾದರು. ಕಣ್ಣೆದುರೇ ಜೊತೆಗಿದ್ದವರು ಸತ್ತು ಬಿದ್ದರು. ಹತ್ತಾರು ಜನರು ಗಾಯಗೊಂಡರು. ಇಂತಹ ಸ್ಥಿತಿ ಯಾರಿಗೂ ಬಾರದಿರಲಿ ಎಂದು ಬಿಕ್ಕಿ ಬಿಕ್ಕಿ ಅತ್ತರು.

**ಶವಾಗಾರದಲ್ಲಿ ಮಗನಿಗಾಗಿ ಕಾಯಬೇಕೆ:** ಕಾಲೇಜಿನಿಂದ ಬರುತ್ತಿದ್ದ ಮಗನ ಬರುವಿಕೆಗಾಗಿ ನಿತ್ಯ ಮನೆ ಬಾಗಿಲಲ್ಲಿ ಕಾಯುತ್ತಿದ್ದೆ. ಈಗ ಶವಾಗಾರದ ಮುಂದೆ ಕಾಯುವಂತಾಗಿದೆ ಎಂದು ಡನಾಯಕನಹಳ್ಳಿ ಪಿಯು ವಿದ್ಯಾರ್ಥಿ ಈಶ್ವರ್ ಅವರ ತಂದೆ ರವಿಕುಮಾರ್ ಗೋಳಾಡಿದರು.

ಈಗ ಕಾಯುವ ಬದಲು ಮೊದಲೇ ಕಾದಿದ್ದರೆ ನನ್ನ ಮಗ ಉಳಿಯುತ್ತಿದ್ದ. ಎಲ್ಲಾ ಮುಗಿದ ಮೇಲೆ ನೂರಾರು ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜನೆ ಮಾಡಿದ್ದೀರಿ. ಯಾವ ಕೊರತೆ ಯಾಗದಂತೆ ಪುತ್ರನನ್ನು ಬೆಳೆಸಿದ್ದೆ. ನನ್ನ ಮಗನನ್ನು ತಂದು ಕೊಡುತ್ತೀರಾ ಎಂದು ಅಂಗಲಾ ಚಿದ್ದು ಮನ ಕಲಕುವಂತಿತ್ತು.

**ಮೆರವಣಿಗೆ ನೋಡಲು ಹೋಗಿದ್ದವು:** ಮೊಸಳೆಹೊಸಳ್ಳಿ ಹಾಸ್ಟೆಲ್‌ನಲ್ಲಿ 150 ಜನರಿದ್ದೆವು. ನಾವು ರಾತ್ರಿ ಊಟ ಮುಗಿಸಿಕೊಂಡು ಮೆರವಣಿಗೆ ನೋಡಲು ಸ್ಥಳಕ್ಕೆ ಬಂದೆವು. ನೋಡ ನೋಡುತ್ತಿದ್ದಂತೆ ಕ್ಯಾಂಟರ್ ನುಗ್ಗಿ ಬಂತು. ನಮಗೆ ಸಣ್ಣಪುಟ್ಟ ಗಾಯಗಳಾಗಿವೆಯೆಂದು ಶಿವಮೊಗ್ಗದ ವಿದ್ಯಾರ್ಥಿ ಕಿರಣ್ ಹೇಳಿದರು.

**ಕೂದಲೆಳೆ ಅಂತರದಲ್ಲಿ ಪಿಎಸ್‌ಐ ಪಾರು**

ಮೊಸಳೆಹೊಸಳ್ಳಿ ಬಳಿ ಸಂಭವಿಸಿದ ಭೀಕರ ದುರಂತದಲ್ಲಿ ಗೊರೂರು ಠಾಣೆ ಪಿಎಸ್‌ಐ ಧನರಾಜ್ ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕ್ಯಾಂಟರ್ ಬೈಕ್‌ಗೆ ಡಿಕ್ಕಿಯಾಗುವ ಕೆಲವು ಸೆಕೆಂಡುಗಳ ಮೊದಲು ಧನರಾಜ್ ಅಲ್ಲಿ ಹೋಗಿದ್ದರು. ಜೋರು ಶಬ್ದಕ್ಕೆ ಹಿಂದುರಿಗಿ ನೋಡಿದಾಗ ಎಲ್ಲವೂ ಮುಗಿದು ಹೋಗಿತ್ತು.

# ಕ್ಯಾನ್ಸರ್‌ಗೆ ಹೆಚ್.ಪಿ.ವಿ. ಲಸಿಕೆಯೇ ಮದ್ದು

• ಪ್ರಜೋದಯ ವರದಿ

**ಆಲೂರು:** 9 ರಿಂದ 45 ವಯೋಮಿತಿಯೊಳಗಿನ ಪುರುಷರು ಮತ್ತು ಮಹಿಳೆಯರು ಹೆಚ್.ಪಿ.ವಿ. ಲಸಿಕೆಯನ್ನು ಪಡೆಯುವುದರಿಂದ ಗರ್ಭಕೊರಳು ಕ್ಯಾನ್ಸರ್‌ನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು ಎಂದು ಪ್ರಸ್ತುತಿ ಸ್ತ್ರೀರೋಗ ತಜ್ಞರ ಸಂಘದ ಅಧ್ಯಕ್ಷೆ ಡಾ. ಪ್ರೇಮಲತಾ ತಿಳಿಸಿದರು.




ಪಟ್ಟಣದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ರಾಧಮ್ಮ ಜನಸ್ಪಂದನ ವೇದಿಕೆ ವತಿಯಿಂದ ಏರ್ಪಡಿಸಲಾಗಿದ್ದ ಉಚಿತ ಹೆಚ್.ಪಿ.ವಿ. ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಮಾತನಾಡಿ, ಲಸಿಕೆಯು ಗರ್ಭಾಶಯ, ಗುದದ್ವಾರ, ಗಂಟಲು ಮತ್ತು ಶಿಶ್ನದ ಕ್ಯಾನ್ಸರ್ ಮತ್ತು ಲೈಂಗಿಕ ಮಸೂರಗಳು ಮುಂತಾದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ದೀರ್ಘಕಾಲಿಕ ರಕ್ಷಣೆ ಒದಗಿಸುತ್ತದೆಯಲ್ಲದೆ ಹರಡುವಿಕೆಯನ್ನು ಕಡಿಮೆ ಮಾಡಲು ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿರುತ್ತದೆ ಎಂದು ಸಲಹೆ ನೀಡಿದರು.

ನಿಮ್ಮ ಲಸಿಕೆ ದಾಖಲೆಗಳು ಮತ್ತು ಪ್ರಕ್ರಿಯೆಗೆ ಸಂಬಂಧಿಸಿದ ವೈಯಕ್ತಿಕ ಆರೋಗ್ಯ ಮಾಹಿತಿ ಗೌಪ್ಯವಾಗಿರುತ್ತದೆ. ನೀವು ಅನುಮತಿ ನೀಡಿದರೆ ಮಾತ್ರ ಹಂಚಿಕೊಳ್ಳಲಾಗುತ್ತದೆ. ನೀವು ಯಾವಾಗ ಬೇಕಾದರೂ ಲಸಿಕೆಯನ್ನು ನಿರಾಕರಿಸಬಹುದು ಅಥವಾ ಮುಂದೂಡಬಹುದು.

ಗರ್ಭಕೊರಳ ಕ್ಯಾನ್ಸರ್ ಹೆಣ್ಣು ಮಕ್ಕಳ ಮರಣಕ್ಕೆ ಕಾರಣವಾಗುತ್ತಿದೆ. ಶೇ. 50 ಕ್ಕೂ ಮೀರಿ ಮಹಿಳೆಯರು ಮರಣ ಹೊಂದುತ್ತಿದ್ದಾರೆ. 30 ವರ್ಷ ಮೇಲ್ಪಟ್ಟ ಮದುವೆಯಾದ ಮಹಿಳೆಯರು ಕಡ್ಡಾಯವಾಗಿ ಸ್ತ್ರೀರೋಗ ತಜ್ಞರಿಂದ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

9–14 ವಯಸ್ಸಿನ ಮಕ್ಕಳು ಲಸಿಕೆ ಪಡೆದರೆ ಶೇ. 100 ರಷ್ಟು ಕ್ಯಾನ್ಸರ್ ರಹಿತ ಜೀವನ ಸಾಗಿಸಬಹುದು. ವೈರಾಣು ಲೈಂಗಿಕವಾಗಿ ಹರಡುವುದರಿಂದ ಪುರುಷರು ಲಸಿಕೆ ಪಡೆದರೆ ಕ್ಯಾನ್ಸರ್ ಮುಕ್ತವಾಗಿ ಬದುಕಬಹುದು ಎಂದು ಮಾಹಿತಿ ನೀಡಿದರು.

ಜಿ. ಪಂ. ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪರಮೇಶ್ ಮಾತನಾಡಿ, ಲಸಿಕೆಯನ್ನು ಆಸ್ಪತ್ರೆಗಳಲ್ಲಿ ಪಡೆಯಲು ಕನಿಷ್ಠ 2000. ರೂ. ಪಾವತಿ ಮಾಡಬೇಕು. ರಾಧಮ್ಮ ಜನಸ್ಪಂದನ ವೇದಿಕೆ ಅಧ್ಯಕ್ಷ ಹೇಮಂತಕುಮಾರ್ ಅವರು ಸ್ವ ಇಚ್ಚೆಯಿಂದ ಹಣ ನೀಡಿ ಲಸಿಕೆ ಕೊಂಡು ಅರ್ಹರಿಗೆ ಉಚಿತವಾಗಿ ನೀಡುತ್ತಿರುವುದು ಶ್ಲಾಘನೀಯ ಎಂದು ಸ್ಮರಿಸಿದರು.

ಇದೆ ಸಂದರ್ಭದಲ್ಲಿ ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಹೇಮಂತ ಕುಮಾರ್‌ಗೆ ಕರೆ ಮಾಡಿ ಮಾತನಾಡಿ ಕ್ಯಾನ್ಸರ್ ತಡೆಗಟ್ಟಲು ಶ್ರಮಿಸುತ್ತಿರುವ ಸೇವೆಯನ್ನು ಅಬಿನಂದಿಸಿದರು.

ಸಮಾರಂಭದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ನಿಸಾರ್ ಫಾತಿಮ, ಡಾ.ಸಾವಿತ್ರಿ, ಡಾ.ಕಿರಣ್, ಜಿ.ಪ್ರಕಾಶ್, ಹೇಮಂತಕುಮಾರ್, ಉಪ ಪ್ರಾಂಶುಪಾಲ ವಿಜಯಕುಮಾರ್, ವಸಂತಕುಮಾರ್ ಉಪಸ್ಥಿತರಿದ್ದರು. ಇದೆ ಸಂದರ್ಭದಲ್ಲಿ 204 ಮಕ್ಕಳಿಗೆ ಲಸಿಕೆ ಹಾಕಲಾಯಿತು.

## ಅರಕಲಗೂಡಿನಲ್ಲಿ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭ | ಸಮಸ್ಯೆಗಳಿಗೆ ಪರಿಹಾರ ಮಾನವೀಯ ಮೌಲ್ಯಗಳು

# ನೈತಿಕತೆ ಇಲ್ಲದ ವಿದ್ಯೆ ದೇಶಕ್ಕೆ ಮಾರಕ: ಜ್ಞಾನಪ್ರಕಾಶ ಸ್ವಾಮೀಜಿ

• ಪ್ರಜೋದಯ ವರದಿ

**ಅರಕಲಗೂಡು:** ಮನುಷ್ಯನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಮಾನವೀಯ ಮೌಲ್ಯಗಳು ಮತ್ತು ಶಿಕ್ಷಣ. ನೈತಿಕತೆ ಇಲ್ಲದ ವಿದ್ಯೆ ದೇಶಕ್ಕೆ ಮಾರಕ ಎಂದು ಮೈಸೂರು ಶ್ರೀಕ್ಷೇತ್ರ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದರು.



ಪಟ್ಟಣದ ಶಿಕ್ಷಕರ ಭವನದಲ್ಲಿ ಶನಿವಾರ ಎಸ್‌ಸಿ.ಎಸ್‌ಟಿ ಪ್ರಾಥಮಿಕ, ಮಾಧ್ಯಮಿಕ ಶಾಲಾ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ ಮತ್ತು ನೌಕರರ ಸಮನ್ವಯ ಸಮಿತಿ ಹಾಗೂ ದಲಿತ ನೌಕರರ ಒಕ್ಕೂಟ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಅಂಬೇಡ್ಕರ್ ಅಭಿಮಾನಿಗಳಾದ ನಾವುಗಳು ಅಂಬೇಡ್ಕರ್ ಜಯಂತಿ ಇತರೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ವೇಳೆ ಅವರ ಭಾವಚಿತ್ರವನ್ನು ಮೆರವಣಿಗೆ ಮಾಡುವುದು ಸಹಜ. ಆದರೆ ಅಂಬೇಡ್ಕರ್ ಅವರು ಬದುಕಿರುವುದು ಪುತ್ಥಳಿಯಲ್ಲಿ ಅಲ್ಲ. ಪುಸ್ತಕದಲ್ಲಿ ಬದುಕಿದ್ದಾರೆ. ಅವರ ಬರವಣಿಗೆಯನ್ನು ಅಧ್ಯಯನ ಮಾಡಿದರೆ ಸಂವಿಧಾನದ ಸಮಗ್ರ ಜಾರಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ನಿಟ್ಟಿನಲ್ಲಿ ಅಂಬೇಡ್ಕರ್. ಬುದ್ಧ, ಕುವೆಂಪು, ಬಸವಣ್ಣ ಅವರ ಬರವಣಿಗೆ ಮನೆ ಮನೆಗಳಿಗೆ ತಲುಪಬೇಕು. ಅದು ಕೇವಲ ವಿದ್ಯೆಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಇಡೀ ರಾಜ್ಯಕ್ಕೆ ಅರಕಲಗೂಡು ಸಾಮರಸ್ಯದ ಬೀಡಾಗಿದೆ. ಇಂದು ಪರಿಶಿಷ್ಟ ಶಿಕ್ಷಕರು,ನೌಕರರು ಒಂದೇ ವೇದಿಕೆಯಡಿ ಎಲ್ಲಾ ವರ್ಗದ ಪ್ರತಿಭಾವಂತ ಮಕ್ಕಳಿಗೆ ಸಮಾನವಾಗಿ ಪುರಸ್ಕಾರ ನೀಡಿ ಗೌರವಿಸುತ್ತಿರುವುದು ಅತ್ಯಂತ ಸಂತಸ ಮತ್ತು ಮಾದರಿಯಾಗಿದೆ. ಇಲ್ಲಿನ ಪ್ರಭುದ್ಧ ರಾಜಕಾರಣಿಯೂ ಆಗಿರುವ ಸ್ನೇಹ ಜೀವಿ ಎ.ಮಂಜು ಅವರ ಸಾರ ಎಲ್ಲರಲ್ಲಿಯೂ ಕೂಡ ಬೆರೆತು ಹೋಗಿದೆ. ಇದನು ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ಇಲ್ಲಿಂದ ಘೋಷಣೆಯಾಗುವ ವಾಕ್ಯ ಅದು ಭಾರತ ಒಂದು, ಭಾರತೀಯರೆಲ್ಲ ಬಂಧು ಎಂಬ ಸಂದೇಶ ಪಸರಿಸಬೇಕು ಎಂದು ಅವರು ಬಣ್ಣಿಸಿದರು.

ಶಾಸಕ ಎ.ಮಂಜು ಅವರು, ನನ್ನ ಕಾಲೇಜು ದಿನಗಳಿಂದಲೂ ಕೂಡ ನಾನು ಅಂಬೇಡ್ಕರ್ ಅನುಯಾಯಿ. ಪರಿಶಿಷ್ಟರ ಸಮುದಾಯದೊಂದಿಗೆ ಬೆಳೆದಿದ್ದೇನೆ.ಕಾಲೇಜು ಹಂತದಿಂದ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಪಡೆಯಲು ನನಗೆ ವಿ.ಶ್ರೀನಿವಾಸ್ ಪ್ರಸಾದ್ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರೇ ರಾಜಕೀಯ ಗುರುಗಳಾಗಿದ್ದಾರೆ. ನಾನು ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪಕ್ಷದಲ್ಲಿ ಗೆದ್ದು ಶಾಸಕನಾಗಿದ್ದೇನೆ. ಈ ಯಶಸ್ಸಿನ ಸಿಂಹಪಾಲು ಪರಿಶಿಷ್ಟ ಸಮಾಜದವರದಾಗಿದೆ ಎಂದರು.

ವಿದ್ಯೆಯಿದ ಮಾತ್ರ ದೇಶದ, ಸಮಾಜದ ಬದಲಾವಣೆಯನ್ನು ಕಾಣಲು ಸಾಧ್ಯ. ಇದನ್ನು ಮನಗಂಡಿರುವ ನಾನು ನನ್ನ ಕ್ಷೇತ್ರದಲ್ಲಿ 18 ಸರಕಾರಿ ಮಕ್ಕಳ ಮನೆಯನ್ನು ತೆರೆದು ಎಲ್ಲಾ ವರ್ಗಗಳ ಮಕ್ಕಳು ಇಂಗ್ಲಿಷ್ ಕಲಿಯಲು ನೆರವು ಕಲ್ಪಿಸಿದ್ದೇನೆ. ಕೇವಲ ಮಾತಿನಿಂದ ಬದಲಾವಣೆ ಸಾಧ್ಯವಿಲ್ಲ.ಅದು ಕಾರ್ಯರೂಪಕ್ಕೆ ತರಬೇಕಿದೆ. ಪುರಸ್ಕಾರ ಪಡೆಯುತ್ತಿರುವ ವಿದ್ಯಾರ್ಥಿಗಳು, ಪೋಷಕರು ಇಂದಿನಿಂದಲೇ ಅಂಬೇಡ್ಕರ್ ಕುರಿತು ಅಧ್ಯಯನ, ಅನುಕರಣೆ ಮಾಡಿದರೇ ಇಡೀ ವಿಶ್ವ ಪುರಸ್ಕರಿಸುವ ಮಟ್ಟಕ್ಕೆ ಹೋಗುವಿರಿ ಎಂದರು.

ಕಾರ್ಯಕ್ರಮದಲ್ಲಿ ಕೆಎಎಸ್ ಅಧಿಕಾರಿಗಳಾದ ಮಹೇಶ್, ಸೌಮ್ಯ, ಚನ್ನಕೇಶವ, ಡಾ.ಪುಷ್ಪಲತಾ ಕ್ಷೇತ್ರ ಶಿಕ್ಷಣಾಧಿಕಾರಿ ನಾರಾಯಣ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು, ಬಿಆರ್‌ಸಿ ಬಾಲರಾಜ್, ಟಿಪಿಒ ನಿಂಗಯ್ಯ, ಪ್ರಾಂಶುಪಾಲರಾದ ಚಂದ್ರಕಲಾ, ಶಿರಸ್ತೇದಾರ್ ಸೋಮಶೇಖರ್, ನೌಕರರ ಸಂಘದ ಅಧ್ಯಕ್ಷ ದೇವರಾಜ್, ಯೋಗರಾಜ್, ಪ್ರಕಾಶ್, ರಮೇಶ್, ವೆಂಕಟೇಶ ಮೂರ್ತಿ, ವಿಷ್ಣುಪ್ರಕಾಶ್, ಸದಾನಂದ ಇತರರು ಉಪಸ್ಥಿತರಿದ್ದರು.

ಶಿಕ್ಷಕರಾದ ಎ.ಬಿ.ಮೂರ್ತಿ, ಎಚ್.ಕೆ. ಮಂಜಪ್ಪ, ಎನ್.ಇ. ದ್ಯಾವಯ್ಯ, ಎಂ.ಮೋಹನ್ ಮತ್ತು ಪಿ.ನಂದಕುಮಾರ್‌ರನ್ನು ಅಭಿನಂದಿಸಲಾಯಿತು.

# ಅಪಘಾತದಿಂದ ಆಘಾತವಾಗಿದೆ: ನಿಖಿಲ್



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಕ್ಯಾಂಟರ್ ಡಿಕ್ಕಿಯಿಂದ 9 ಜನರು ಮೃತಪಟ್ಟ ಪ್ರಕರಣಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕಂಬನಿ ಮಿಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಘೋರ ದುರಂತದಿಂದ ಸಾಕಷ್ಟು ನೋವಾಗಿದೆ. ಮಕ್ಕಳ ಮೇಲೆ ಪೋಷಕರು ಕನಸು ಕಂಡಿರುತ್ತಾರೆ. ಈ ಘಟನೆಯಿಂದ ಅವರ ಮನಸಿನ ಮೇಲೆ ಆದ ನೋವನ್ನು ದೂರ ಮಾಡಲು ಸಾಧ್ಯವಿಲ್ಲ. ತಾಯಿ ಚಾಮುಂಡೇಶ್ವರಿ ಎಲ್ಲರಿಗೂ ನೋವು ಭರಿಸುವ ಶಕ್ತಿ ಕರುಣಿಸಲಿ ಎಂದು ಪ್ರಾರ್ಥಿಸಿದರು.

ದುರ್ಘಟನೆಯಲ್ಲಿ ಕಳೆದುಕೊಂಡ ಜೀವಕ್ಕೆ ಯಾರು ಬೆಲೆ ಕಟ್ಟುವುದಕ್ಕೆ ಆಗುವುದಿಲ್ಲ. ಅದರಲ್ಲೂ ಅವರ ತಂದೆ–ತಾಯಿ ಮಕ್ಕಳ ಕಂಡಿದ್ದ ಕನಸು ಮಣ್ಣುಪಾಲಾಗಿದೆಯೆಂದರು.

**ಪರಿಹಾರ ಮೊತ್ತ ಹೆಚ್ಚಿಸಲಿ**

ದುರಂತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ರಾಜ್ಯ ಸರ್ಕಾರ 5 ಲಕ್ಷ ರೂ. ಪರಿಹಾರ ಘೋಷಿಸಿದೆ. ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ತಿಳಿದು ಮಾನವೀಯತೆ ದೃಷ್ಟಿಯಿಂದ ಸರ್ಕಾರ ಹೆಚ್ಚು ಪರಿಹಾರ ಘೋಷಣೆ ಮಾಡಬೇಕೆಂದು ಆಗ್ರಹಿಸಿದರು.

ಈ ಘಟನೆಯನ್ನು ನಾವು ಯಾರೂ ಊಹೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ದುರಂತದ ವಿಡಿಯೋ ನೋಡಿ ನಾವೆಲ್ಲರೂ ಬೆಚ್ಚಿಬಿದ್ದಿದ್ದೇವೆ. ಪ್ರಕರಣದ ಸತ್ಯಾಸತ್ಯತೆಗಾಗಿ ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

# ಬೆಳ್ಳಿ ಸಾಮಗ್ರಿ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ದೇವಸ್ಥಾನದ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು ನಗದು ಸೇರಿ 4.65 ಲಕ್ಷ ರೂ. ಮೌಲ್ಯದ ಬೆಳ್ಳಿ ಸಾಮಾಗ್ರಿ ಕದ್ದಿರುವ ಘಟನೆ ತಾಲ್ಲೂಕಿನ ಜಾವನಹಳ್ಳಿ ಗ್ರಾಮದ ಜವರ ಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಡೆದಿದೆ.

ಸೆ. 11ರ ರಾತ್ರಿ ಬಂದಿರುವ ಕಳ್ಳರು ಬಲವಾದ ಆಯುಧದಿಂದ ಬಾಗಿಲು ಮುರಿದು 4 ಲಕ್ಷ ರೂ. ಮೌಲ್ಯದ 4 ಕೆ.ಜಿ. 900 ಮಿಲಿ ಗ್ರಾಂ ತೂಕದ ಬೆಳ್ಳಿ ಸಾಮಾಗ್ರಿ ಕಳವು ಮಾಡಿದ್ದಾರೆ. 750 ಗ್ರಾಂ. ತೂಕದ ಒಂದು ಜೊತೆ ದೇವರ ಬೆಳ್ಳಿಯ ಪಾದ, 2 ಕೆ.ಜಿ. ತೂಕದ ಒಂದು ಜೊತೆ ಬೆಳ್ಳಿಯ ದೀಪಾಲೆ ಕಂಬ, 3 ಕೆ.ಜಿ. 400 ಗ್ರಾಂ ತೂಕದ ದೇವರ ಮೇಲಿದ್ದ ನಾಗಭರಣ, 750 ಗ್ರಾಂ ತೂಕದ 3 ಬೆಳ್ಳಿಯ ಛತ್ರಿ, ಮತ್ತೊಂದು ದೇವರ ಮೇಲಿದ್ದ ಸುಮಾರು 500 ಹಾಗು 250 ಗ್ರಾಂ ತೂಕದ 2 ನಾಗಭರಣ ಹಾಗು ಬೀರುವಿನಲ್ಲಿಟ್ಟಿದ್ದ 65 ಸಾವಿರ ರೂ. ನಗದು ದೋಚಿದ್ದಾರೆ.

ಪೊಲೀಸರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019

C M Y K C M Y K C M Y K C M Y K